PRGI NO : KNKAN/26/A0884

ಈ ನಮ್ಮ

# ಧೃತಿ ನ್ಯೂಸ್

ಸದೃಢತೆಯ ಹೆಜ್ಜೆಯೊಂದಿಗೆ..., ಕನ್ನಡ ದಿನಪತ್ರಿಕೆ

E NAMMA DHURTHI NEWS KANNADA DAILY NEWS PAPER

- ಕೊಪ್ಪಳ
- ವಿಜಯನಗರ
- ರಾಯಚೂರು
- ಬಳ್ಳಾರಿ
- ಗದಗ
- ಬಾಗಲಕೋಟೆ
- ಹಾವೇರಿ
- ಧಾರವಾಡ

ಸಂಪಾದಕರು: ಚಂದ್ರಕಾಂತ | ಸಂಪುಟ: 01 ಸಂಚಿಕೆ: 205 ಪುಟಗಳು: 04 ಬೆಲೆ: 02 ದಿನಾಂಕ: 01-10-2026 ಗುರುವಾರ | email: enammadhruthinews@gmail.com Pho : 7353595904

## 8 ಸಾವಿರ ಕೋಟಿ ರೂ. ಬಾಕಿ ಪಾವತಿಗೆ ಸರ್ಕಾರಕ್ಕೆ ಗಡುವು ನೀಡಿದ ಗುತ್ತಿಗೆದಾರರು

ಧೃತಿ ನ್ಯೂಸ್ ಸುದ್ದಿ

ಬೆಂಗಳೂರು: ರಾಜ್ಯದ ವಿವಿಧ ಇಲಾಖೆಗಳ ಕಾಮಗಾರಿಗಳನ್ನು ಪೂರ್ಣಗೊಳಿಸಿ ವರ್ಷಗಳೇ ಕಳೆದರೂ ಬಿಲ್ ಪಾವತಿಯಾಗಿಲ್ಲ ಎಂದು ಆರೋಪಿಸಿರುವ ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘ, ಸುಮಾರು 38 ಸಾವಿರ ಕೋಟಿ ರೂ. ಬಾಕಿ ಮೊತ್ತವನ್ನು ಡಿಸೆಂಬರ್ ಅಂತ್ಯದೊಳಗೆ ಬಿಡುಗಡೆ ಮಾಡಬೇಕು ಎಂದು ಸರ್ಕಾರಕ್ಕೆ ಗಡುವು ನೀಡಿದೆ.

ಬೇಡಿಕೆ ಈಡೇರದಿದ್ದರೆ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸುವುದಾಗಿ ಸಂಘ ಎಚ್ಚರಿಸಿದೆ. ನಗರದಲ್ಲಿ ಸುದ್ದಿಗೋಷ್ಠಿ ನಡೆಸಿದ ಸಂಘದ ಅಧ್ಯಕ್ಷ ಆರ್. ಮಂಜುನಾಥ್, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ 10 ದಿನಗಳ ಹಿಂದೆ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದು ಹೇಳಿದರು. ಸುಮಾರು 1.5 ಲಕ್ಷ ಗುತ್ತಿಗೆದಾರರು ಹಲವು ವರ್ಷಗಳಿಂದ ಬಾಕಿ ಹಣಕ್ಕಾಗಿ ಕಾಯುತ್ತಿದ್ದಾರೆ ಎಂದು ಅವರು ತಿಳಿಸಿದರು.ಸಂಘದ ಅಂಕಿ-ಅಂಶಗಳ ಪ್ರಕಾರ, ಲೋಕೋಪಯೋಗಿ ಇಲಾಖೆಯಲ್ಲಿ 8,370 ಕೋಟಿ, ಜಲಸಂಪನೂಲ ಇಲಾಖೆಯಲ್ಲಿ



14,000 ಕೋಟಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ 3,000 ಕೋಟಿ, ಸಣ್ಣ ನೀರಾವರಿಯಲ್ಲಿ 3,600 ಕೋಟಿ, ನಗರಾಭಿವೃದ್ಧಿಯಲ್ಲಿ 1,800 ಕೋಟಿ, ವಸತಿ ಮತ್ತು ವಕ್?ಫ ಇಲಾಖೆಯಲ್ಲಿ 2,600 ಕೋಟಿ, ಕಾರ್ಮಿಕ ಇಲಾಖೆಯಲ್ಲಿ 2,000 ಕೋಟಿ ಹಾಗೂ ಬಿಬಿಎಂಪಿಯಲ್ಲಿ 2,600 ಕೋಟಿ ಬಾಕಿ ಇದೆ. ಒಟ್ಟು ಬಾಕಿ ಮೊತ್ತ ಸುಮಾರು 37,980 ಕೋಟಿ ಎಂದು ಸಂಘ ತಿಳಿಸಿದೆ.

ಜೂನ್ 30ರಂದು ಮುಖ್ಯಮಂತ್ರಿ ಅವರೊಂದಿಗೆ ನಡೆದ ಸಭೆಯಲ್ಲಿ ಬಾಕಿ ಮೊತ್ತ ಬಿಡುಗಡೆಗೆ ಎರಡು ತಿಂಗಳೊಳಗೆ ಕ್ರಮ ಕೈಗೊಳ್ಳುವ ಭರವಸೆ ನೀಡಲಾಗಿತ್ತು. ಆದರೆ ಗಡುವು ಕಳೆದರೂ ಹಣ ಬಿಡುಗಡೆಯಾಗಿಲ್ಲ ಎಂದು ಮಂಜುನಾಥ್ ಆರೋಪಿಸಿದರು. ಕೆಲವು ಕಾಮಗಾರಿಗಳು ಪೂರ್ಣಗೊಂಡು ಎರಡು ವರ್ಷ ಕಳೆದಿದ್ದರೂ ಬಿಲ್ ಪಾವತಿಯಾಗಿಲ್ಲ ಎಂದರು. ಬಿಲ್ ಪಾವತಿ ಮತ್ತು ಟೆಂಡರ್ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕೊರತೆಯಿದೆ ಎಂದು ಸಂಘ ಆರೋಪಿಸಿದೆ. ಕೆಲವು ಕಡೆ ಅಧಿಕಾರಿಗಳು ಹಾಗೂ ರಾಜಕಾರಣಿಗಳಿಗೆ ಕಮಿಷನ್ ನೀಡಿದರೆ ಮಾತ್ರ ಬಿಲ್ ಮಾಡಲಾಗುತ್ತಿದೆ ಎಂಬ ಆರೋಪವನ್ನೂ ಮಂಜುನಾಥ್ ಮಾಡಿದರು. ಮುಖ್ಯಮಂತ್ರಿ ಸಭೆ ಕರೆದರೆ ಯಾವ ಇಲಾಖೆಯಲ್ಲಿ ಎಷ್ಟು ಪರ್ಸೆಂಟೇಜ್ ಕೇಳಲಾಗುತ್ತಿದೆ ಎಂಬುದನ್ನು ಬಹಿರಂಗಪಡಿಸುವುದಾಗಿ ಹಾಗೂ ಅಗತ್ಯವಿದ್ದರೆ ದಾಖಲೆಗಳನ್ನು ಬಿಡುಗಡೆ ಮಾಡುವುದಾಗಿ ಎಚ್ಚರಿಸಿದರು.

ಸರ್ಕಾರ ಕ್ರಮ ಕೈಗೊಳ್ಳದಿದ್ದರೆ 31 ಜಿಲ್ಲೆಗಳ ಜಿಲ್ಲಾಧಿಕಾರಿ ಕಚೇರಿಗಳವರೆಗೆ ಪಾದಯಾತ್ರೆ ನಡೆಸುವುದಾಗಿ ಸಂಘ ತಿಳಿಸಿದೆ. ಡಿಸೆಂಬರ್ ಅಂತ್ಯದೊಳಗೆ ಬಾಕಿ ಹಣ ಬಿಡುಗಡೆ ಮಾಡಬೇಕು.ಇಲ್ಲದಿದ್ದರೆ ಹೋರಾಟ ತೀವ್ರಗೊಳಿಸಲಾಗುವುದು ಎಂದು ಮಂಜುನಾಥ್ ಹೇಳಿದರು.ಈ ಆರೋಪಗಳಿಗೆ ಸರ್ಕಾರದ ಅಧಿಕೃತ ಪ್ರತಿಕ್ರಿಯೆ ಇನ್ನಷ್ಟೇ ಹೊರಬರಬೇಕಿದೆ.

## ಯಲಬುರ್ಗಾ ಪಟ್ಟಣದಲ್ಲಿಂದು ವಿಶ್ವಕರ್ಮ ಜಯಂತಿ ಆಚರಣೆ

ಧೃತಿ ನ್ಯೂಸ್ ಸುದ್ದಿ

ಯಲಬುರ್ಗಾ: ಪಟ್ಟಣದ ವಿಶ್ವಕರ್ಮ ಬಳಗದಿಂದ ಶ್ರೀ ವಿರಾಟ ವಿಶ್ವಕರ್ಮ ಪೂಜಾ ಮಹೋತ್ಸವ ಹಾಗೂ ಶ್ರೀ ಕಾಳಿಕಾದೇವಿ ಅಮ್ಮನವರಿಗೆ ವಿಶೇಷ ಪೂಜೆ ಅಭಿಷೇಕ ಸಲ್ಲಿಸುವುದರೊಂದಿಗೆ ವಿಶ್ವಕರ್ಮ ಜಯಂತಿಯನ್ನು ಆಚರಿಸಲಾಯಿತು ಯಲಬುರ್ಗಾ ನಗರದ ಪ್ರಮುಖ ಬೀದಿಗಳಲ್ಲಿ ವಿಶ್ವಕರ್ಮರ ಭಾವಚಿತ್ರ ಮೆರವಣಿಗೆಯನ್ನು ನೆಡೆಸಲಾಯಿತು.



ಮೆರವಣಿಗೆಯಲ್ಲಿ ಮಹಿಳೆಯರು ಮಕ್ಕಳು ಭಾಗವಹಿಸಿದ್ದರು ನಂತರ ಶ್ರೀ ಗ್ರಾಮ ದೇವತೆ ದೇವಸ್ಥಾನದ ಹತ್ತಿರ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು ಅನ್ನಪ್ರಸಾದ ಯಶಸ್ವಿಯಾಗಿ ನೆರವೇರಿತು ಈ ಸಂದರ್ಭದಲ್ಲಿ ಯಲಬುರ್ಗಾ ವಿಶ್ವಕರ್ಮ ಸಮಾಜಧ ನಾಗರಾಜ ಬಡಿಗೇರ ಪ್ರಹ್ಲಾದ್ ಬಡಿಗೇರ್ ಮೌನೇಶ್ ಬಡಿಗೇರ ಈರಣ್ಣ ಬಡಿಗೇರ ಮಹೇಶ ಬಡಿಗೇರ ಮಂಜುನಾಥ್ ಬಡಿಗೇರ್ ಹನುಮಂತಪ್ಪ ಬಡಿಗೇರ್, ರವಿ ಬಡಿಗೇರ್ ,ಶಿವು ಬಡಿಗೇರ್ ಅರುಣಪ್ಪ ಬಡಿಗೇರ್ ಹಾಗೂ ಯಲಬುರ್ಗಾ ತಾಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷರಾದ ಶ್ರೀ ಶಂಕ್ರಪ್ಪ ಬಡಿಗೇರ್ ಕೊಪ್ಪಳ ಜಿಲ್ಲಾ ಉಪಾಧ್ಯಕ್ಷರು ಮಹಾದೇವಪ್ಪ ಕಮ್ಮಾರ್ ಹಾಗೂ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಅಧ್ಯಕ್ಷರಾದ ಗುರುಮೂರ್ತಿ ಬಡಿಗೇರ್ ಹಾಗೂ ನಗರ ಘಟಕ ವಿಶ್ವಕರ್ಮ ಮಹಾಸಭಾ ಅಧ್ಯಕ್ಷರಾದ ಚಿದಾನಂದಪ್ಪ ಬಡಿಗೇರ ವಿಶ್ವಕರ್ಮ ಸಮಾಜದ ಹಿರಿಯರಾದ ಮುಕ್ಕಣ್ಣ ಬಡಿಗೇರ ಅಚ್ಚಪ್ಪ ಬಡೀಗೆರ ಅಶೋಕಪ್ಪ ಬಡಿಗೇರ. ವಿಶ್ವಕರ್ಮ ಸಮಾಜದ ಯುವ ಮುಖಂಡರಾದ ಸುರೇಶ್ ಕಮ್ಮಾರ್ ಚಂದ್ರಶೇಖರ್ ಕಮ್ಮಾರ್ ಮುತ್ತಣ್ಣ ಬಡಿಗೇರ್ ಈರಪ್ಪ ಕಮ್ಮಾರ ಗಂಗಾಧರ್ ಬಡಿಗೇರ್ ಹಾಗೂ ಸಮಾಜದ ಮಹಿಳೆಯರು ಮಕ್ಕಳು ಯಲಬುರ್ಗಾ ಪಟ್ಟಣದ ಸರ್ವ ಸದ್ಭಕ್ತರು ಜನಪ್ರತಿನಿಧಿಗಳು ಇನ್ನಿತರರು ಹಾಜರಿದ್ದರು.

## ಕುಕನೂರಿಗೆ ಮೌನೇಶ ರಾಠೋಡ ನೂತನ ಪಿಎಸ್ಸೈ

ಧೃತಿ ನ್ಯೂಸ್ ಸುದ್ದಿ

ಕುಕನೂರು: ಸ್ಥಳೀಯ ಪೊಲೀಸ್ ಠಾಣೆಗೆ ನೂತನ ಪಿಎಸ್ಸೈ



ಆಗಿ ಮೌನೇಶ ರಾಠೋಡ ಬುಧವಾರ ಅಧಿಕಾರ ವಹಿಸಿಕೊಂಡಿದ್ದಾರೆ. ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಾನೂನು ಸುವ್ಯವಸ್ಥೆಗೆ ಆದ್ಯತೆ ನೀಡುವುದಾಗಿ ತಿಳಿಸಿದ್ದಾರೆ.

## ಕೃಷಿ ಕಾಯಕಯೋಗಿ ತೋಟಕ್ಕೆ ಬಸನಗೌಡ ಪಾಟೀಲ ಯತ್ನಾಳ ಭೇಟಿ

ಧೃತಿ ನ್ಯೂಸ್ ಸುದ್ದಿ

ಕುಷ್ಟಗಿ: ತಾಲೂಕಿನ ಮದಲಗಟ್ಟಿ ಸಮೀಪದ ಕೃಷಿ ಕಾಯಕಯೋಗಿ ಡಾ. ದೇವೇಂದ್ರಪ್ಪ ಬಳೂಟಗಿ ಅವರ ತೋಟಕ್ಕೆ ಮಾಜಿ ಕೇಂದ್ರ ಸಚಿವ ಬಸನಗೌಡ ಪಾಟೀಲ ಯತ್ನಾಳ ಭೇಟಿ ನೀಡಿ, ವಿವಿಧ ಬೆಳೆಗಳು ಹಾಗೂ ತೋಟದ ಕೃಷಿ ಚಟುವಟಿಕೆಗಳನ್ನು ವೀಕ್ಷಿಸಿದರು.



ಡಾ. ದೇವೇಂದ್ರಪ್ಪ ಬಳೂಟಗಿ ಅವರು ತಮ್ಮ ತೋಟದಲ್ಲಿ ಶ್ರೀಗಂಧ, ತೇಗ, ಪಪ್ಪಾಯ, ಮಾವು, ದಾಳಿಂಬೆ, ಹುಣಸೆ, ತೆಂಗು, ಬಿದಿರು, ಪೇರಲೆ, ಮೂಸಂಬಿ, ಬೇವು, ರಕ್ತಚಂದನ ಹಾಗೂ ಕಿನೊ ಸೇರಿದಂತೆ ವಿವಿಧ ಜಾತಿಯ ಗಿಡಗಳನ್ನು ಬೆಳೆಸಿದ್ದಾರೆ. ತೋಟದ ಹಚ್ಚಹಸಿರಿನ ವಾತಾವರಣದಲ್ಲಿ ಪಕ್ಷಿಗಳ ಕಲರವದೊಂದಿಗೆ ಇಲಿ, ಹಾವು, ಮುಂಗುಸಿ ಸೇರಿದಂತೆ ವಿವಿಧ ಜೀವಿಗಳ ಸಹಜ ಚಟುವಟಿಕೆಗಳು ಕಂಡುಬಂದವು. ಇದರಿಂದ ತೋಟದಲ್ಲಿ ಜೀವ ವೈವಿಧ್ಯತೆಯೂ ಉತ್ತಮವಾಗಿ ರೂಪುಗೊಂಡಿರುವುದು ಗಮನ ಸೆಳೆಯಿತು. ಕೃಷಿ ಹೊಂಡದ ಪ್ರದೇಶದಲ್ಲಿ ಕುಳಿತು ತೋಟದ ಸುತ್ತಲೂ ದೃಷ್ಟಿ ಹಾಯಿಸಿದಾಗ ದಾಳಿಂಬೆ, ಮಾವು, ನೆಲ್ಲಿ ಸೇರಿದಂತೆ ವಿವಿಧ ಹಣ್ಣಿನ ಗಿಡಗಳಿಂದ ಕೂಡಿದ ಆಹ್ಲಾದಕರ ಪರಿಸರ ಕಂಡುಬಂತು. ಈ ಸಂದರ್ಭದಲ್ಲಿ ಡಾ. ದೇವೇಂದ್ರಪ್ಪ ಬಳೂಟಗಿ ಅವರು ತೋಟದಲ್ಲಿ ಬೆಳೆದಿರುವ ವಿವಿಧ ಗಿಡಗಳ ವಿಶೇಷತೆ, ಕೃಷಿ ಪದ್ಧತಿ ಹಾಗೂ ಅವುಗಳ ನಿರ್ವಹಣೆ ಕುರಿತು ಬಸನಗೌಡ ಪಾಟೀಲ ಯತ್ನಾಳ ಅವರಿಗೆ ವಿವರಿಸಿದರು. ಯತ್ನಾಳ ಅವರು ತೋಟದ ಕೃಷಿ ಚಟುವಟಿಕೆಗಳನ್ನು ವೀಕ್ಷಿಸಿ, ವಿವಿಧ ಬೆಳೆಗಳ ಕುರಿತು ಮಾಹಿತಿ ಪಡೆದುಕೊಂಡರು. ಬಸನಗೌಡ ಪಾಟೀಲ ಯತ್ನಾಳ ಅವರು ತೋಟಕ್ಕೆ ಭೇಟಿ ನೀಡಿರುವ ಸುದ್ದಿ ತಿಳಿದು ಬಿಜೆಪಿ ಮುಖಂಡ ಬಸವರಾಜ ಹಳ್ಳೂರ ನೇತೃತ್ವದಲ್ಲಿ ಪಕ್ಷದ ಕಾರ್ಯಕರ್ತರು ಭೇಟಿ ನೀಡಿ ಅವರನ್ನು ಸನ್ಮಾನಿಸಿದರು.

## ಜಿಲ್ಲಾ ಆರೋಗ್ಯ ಇಲಾಖೆಯಿಂದ ವಿಶ್ವ ರೇಬಿಸ್ ದಿನ ಆಚರಣೆ

ಧೃತಿ ನ್ಯೂಸ್ ಸುದ್ದಿ

ಕೊಪ್ಪಳ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಕೊಪ್ಪಳದ ಭಾಗ್ಯನಗರದಲ್ಲಿರುವ ಗುಪ್ತ ಹೇರ್ ಫ್ಯಾಕ್ಟರಿಯಲ್ಲಿ ಸೆಪ್ಟೆಂಬರ್ 28 ರಂದು ವಿಶ್ವ ರೇಬಿಸ್ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು.

ಈ ವರ್ಷದ ವಿಶ್ವ ರೇಬಿಸ್ ದಿನದ “ Stronger Together – ಒಗ್ಗಟ್ಟಿನ ಹೆಜ್ಜೆ, ರೇಬೀಸ್ ಮುಕ್ತ ಸಮಾಜದತ್ತ’ ಎಂಬ ಧ್ಯೇಯವಾಕ್ಯದಡಿ, ರೇಬಿಸ್ ರೋಗದ ಬಗ್ಗೆ ಅರಿವು, ಅದರ ಇತಿಹಾಸ, ತಡೆಗಟ್ಟುವಿಕೆ, ಯಾವುದೇ ಪ್ರಾಣಿಗಳ ಕಡಿತದ ನಂತರ ಮಾಡಬೇಕಾದ್ದು ಮತ್ತು ಮಾಡಬಾರದು, ರೇಬಿಸ್ ನಿರೋಧಕ ಲಸಿಕೆಯ ಮಹತ್ವ ಹಾಗೂ ನಿಗದಿತ ಲಸಿಕಾ ವೇಳಾ ಪಟ್ಟಿಯನ್ನು ಪೂರ್ಣಗೊಳಿಸುವ ಅಗತ್ಯತೆ ಕುರಿತು ಜಾಗೃತಿ ಮೂಡಿಸಲಾಯಿತು. ರೇಬಿಸ್‌ನಿಂದಾಗುವ ಸಾವುಗಳನ್ನು ತಡೆಗಟ್ಟಲು ಸಮುದಾಯದ ಸಕ್ರಿಯ ಭಾಗವಹಿಸುವಿಕೆ



ಹಾಗೂ ವಿವಿಧ ಇಲಾಖೆಗಳ ಸಮನ್ವಯದ ಮಹತ್ವವನ್ನು ಒತ್ತಿಹೇಳಲಾಯಿತು. 2030ರ ವೇಳೆಗೆ ನಾಯಿಯಿಂದ ಹರಡುವ ಮಾನವ ರೇಬಿಸ್‌ನಿಂದ ಶೂನ್ಯ ಸಾವುಗಳ ಗುರಿಯನ್ನು ಸಾಧಿಸುವ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಈಶ್ವರ ಸವಡಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ನಂದಕುಮಾರ್ ಹೆಚ್., ಆರೋಗ್ಯ ಇಲಾಖೆಯ ವಿವಿಧ ಕಾರ್ಯಕ್ರಮಗಳ ಅನುಷ್ಠಾನಾಧಿಕಾರಿಗಳು ಭಾಗವಹಿಸಿದ್ದರು. ಗುಪ್ತ ಹೇರ್ ಫ್ಯಾಕ್ಟರಿಯ ಮಾಲೀಕರಾದ ಶ್ರೀನಿವಾಸ ಗುಪ್ತ ಅವರು ಮುಖ್ಯ ಅತಿಥಿಯಾಗಿ ಉಪಸ್ಥಿತರಿದ್ದರು.

## ಶ್ರೀ ಅಮರನಾಥೇಶ್ವರ ಮಹಾದೇವ ಮಠಕ್ಕೆ ಬಸನಗೌಡ ಪಾಟೀಲ ಯತ್ನಾಳ ಭೇಟಿ



ಧೃತಿ ನ್ಯೂಸ್ ಸುದ್ದಿ

ಕುಷ್ಟಗಿ: ಧಾರ್ಮಿಕ ಹಾಗೂ ಆಧ್ಯಾತ್ಮಿಕ ಕಾರ್ಯಗಳಿಗೆ ಹೆಸರುವಾಸಿಯಾಗಿರುವ ತಾಲೂಕಿನ ಮದಲಗಟ್ಟಿ ಸಮೀಪದ ಶ್ರೀ ಅಮರನಾಥೇಶ್ವರ ಮಹಾದೇವ ಮಠ ನಾಗಸಾಧು ಆಶ್ರಮಕ್ಕೆ ಮಾಜಿ ಕೇಂದ್ರ ಸಚಿವ ಬಸನಗೌಡ ಪಾಟೀಲ ಯತ್ನಾಳ ಭೇಟಿ ನೀಡಿದರು.

ಈ ಸಂದರ್ಭದಲ್ಲಿ ಶ್ರೀಮಠದಲ್ಲಿ ಲೋಕಕಲ್ಯಾಣಕ್ಕಾಗಿ ವಿಶೇಷ ಪೂಜೆ ಸಲ್ಲಿಸಿ, ನಾಡಿಗೆ ಒಳಿತಾಗಲಿ, ಜನರಿಗೆ ಸುಖ-ಶಾಂತಿ, ಸಮೃದ್ಧಿ ದೊರೆಯಲಿ ಎಂದು ಪ್ರಾರ್ಥಿಸಿದರು. ಬಳಿಕ ಶ್ರೀಮಠದ ಪೀಠಾಧಿಕಾರಿಗಳಾದ ಶ್ರೀಮಹಂತ ಸಹದೇವನಂದಗಿರಿ ಮಹಾರಾಜರ ದರ್ಶನ ಪಡೆದು ಆಶೀರ್ವಾದ ಪಡೆದರು. ಯತ್ನಾಳ ಅವರು ಮಠಕ್ಕೆ ಭೇಟಿ ನೀಡಿರುವ ಸುದ್ದಿ ತಿಳಿಯುತ್ತಿದ್ದಂತೆ ಬಿಜೆಪಿ ಮುಖಂಡ ಬಸವರಾಜ ಹಳ್ಳೂರ ಸೇರಿದಂತೆ ಅವರ ಹಿತೈಷಿಗಳು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಮಠಕ್ಕೆ ಆಗಮಿಸಿ ಯತ್ನಾಳ ಅವರನ್ನು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಶ್ರೀಮಠದ ಪದಾಧಿಕಾರಿಗಳು ಹಾಗೂ ಭಕ್ತರು ಉಪಸ್ಥಿತರಿದ್ದರು.

## ಇಂದು ವಿಶ್ವ ಹಿರಿಯ ನಾಗರಿಕರ ದಿನಾಚರಣೆ

ಧೃತಿ ನ್ಯೂಸ್ ಸುದ್ದಿ

ಕೊಪ್ಪಳ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಸೇವಾ ನಿರತ ಸ್ವಯಂ ಸೇವಾ ಸಂಸ್ಥೆಗಳ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಅಕ್ಟೋಬರ್ 1 ರಂದು 2026-27ನೇ ಸಾಲಿನ ವಿಶ್ವ ಹಿರಿಯ ನಾಗರಿಕರ ದಿನಾಚರಣೆಯನ್ನು ಸರ್ಕಾರಿ ನೌಕರರ ಸಾಂಸ್ಕೃತಿಕ ಭವನದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯ ಎಲ್ಲಾ ಹಿರಿಯ ನಾಗರಿಕರು ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಯುವ ಸಂಸತ್ ರಚನೆ ಕುರಿತು ಪೂರ್ವಭಾವಿ ಸಭೆ

## ಜವಾಬ್ದಾರಿಯುತವಾಗಿ ಕಾರ್ಯಕ್ರಮ ಆಯೋಜಿಸುವಂತೆ ಜಿಲ್ಲಾಧಿಕಾರಿಗಳ ಸೂಚನೆ

ಧೃತಿ ನ್ಯೂಸ್ ಸುದ್ದಿ

ಕೊಪ್ಪಳ: ಸಂಸದೀಯ ನಡಾವಳಿಗಳು, ಸಂವಿಧಾನಿಕ ಮೌಲ್ಯಗಳು ಹಾಗೂ ಶಾಸಕಾಂಗದ ಕಾರ್ಯವೈಖರಿಯ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಸರ್ಕಾರ ಹಮ್ಮಿಕೊಂಡಿರುವ 'ಯುವ ಸಂಸತ್' ಕಾರ್ಯಕ್ರಮವನ್ನು ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಯಶಸ್ವಿಯಾಗಿ ಆಯೋಜಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ ಅವರು ಸೂಚನೆ ನೀಡಿದರು. ಬುಧವಾರದಂದು ಗೂಗಲ್ ಮೀಟ್ ಮೂಲಕ ವಿವಿಧ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ವಕೀಲರು, ನ್ಯಾಯಾಧೀಶರೊಂದಿಗೆ ಹಮ್ಮಿಕೊಂಡಿದ್ದ ವಿಡಿಯೋ ಸಂವಾದದಲ್ಲಿ ಅವರು ಮಾತನಾಡಿದರು.

ತಾಲೂಕು ಮಟ್ಟದ ಸಮಿತಿಯಲ್ಲಿ ಅಗತ್ಯವಿದ್ದಲ್ಲಿ ತಹಶೀಲ್ದಾರರು ಸಂವಿಧಾನದ ಬಗ್ಗೆ ಪರಿಣಿತರಿರುವ ಇಬ್ಬರು ಕಾಲೇಜು ಉಪನ್ಯಾಸಕರನ್ನು ಸಮಿತಿಗೆ ಸೇರ್ಪಡೆ ಮಾಡಿಕೊಳ್ಳಬಹುದು. ಜಿಲ್ಲೆಯ 5 ವಿಧಾನಸಭಾ ಕ್ಷೇತ್ರಗಳಿಂದ ತಲಾ 50 ವಿದ್ಯಾರ್ಥಿಗಳನ್ನು ಯುವ ಸಂಸತ್ತಿಗೆ ಆಯ್ಕೆ ಮಾಡಿ ಕಳುಹಿಸಬೇಕು. 50 ವಿದ್ಯಾರ್ಥಿಗಳ ತಂಡದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳು ಶೇ.8 ರಿಂದ 10, ಪದವಿಪೂರ್ವ ವಿದ್ಯಾರ್ಥಿಗಳು ಶೇ.10 ರಿಂದ 15, ಪದವಿ ವಿದ್ಯಾರ್ಥಿಗಳು ಶೇ.50 ರಿಂದ 60 ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಶೇ.20 ರಿಂದ 30 ರಷ್ಟಿರಬೇಕು. ಸಮಿತಿಯು ತೀರ್ಮಾನಿಸಿದ ಮಾನದಂಡಕ್ಕೆ ಅನುಗುಣವಾಗಿ ಮೇಲ್ಕಂಡ ಅನುಪಾತದ ಸರ್ಕಾರಿ, ಅನುದಾನಿತ, ಖಾಸಗಿ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳನ್ನು ತಮ್ಮ ಹಂತದಲ್ಲಿಯೇ ಆಯ್ಕೆ ಮಾಡಿಕೊಳ್ಳಬೇಕು ಎಂದು ಅವರು ತಿಳಿಸಿದರು.



ಪದವಿ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳನನು ಆಯ್ಕೆ ಮಾಡುವಾಗ ಕಲೆ, ವಾಣಿಜ್ಯ, ವಿಜ್ಞಾನ, ಕಾನೂನು, ಇಂಜಿನಿಯರಿಂಗ್, ವೈದ್ಯಕೀಯ, ಕೃಷಿ, ತೋಟಗಾರಿಕೆ ಸೇರಿದಂತೆ ಎಲ್ಲಾ ಕೋರ್ಸಿನ ವಿದ್ಯಾರ್ಥಿಗಳು ಒಳಗೊಳ್ಳುವಂತೆ ಕ್ರಮ ವಹಿಸಬೇಕು. ತಾಲ್ಲೂಕು ಕೇಂದ್ರಗಳಲ್ಲಿ ಸ್ನಾತಕೋತ್ತರ ಕೇಂದ್ರಗಳು ಇಲ್ಲದಿದ್ದರೆ, ಆ ಸ್ನಾತಕೋತ್ತರ ವಿಭಾಗಕ್ಕೆ ನಿಗದಿಪಡಿಸಿದ ವಿದ್ಯಾರ್ಥಿಗಳ ಅನುಪಾತವನ್ನು ಪದವಿ ವರ್ಗಕ್ಕೆ ವರ್ಗಾಯಿಸಿಕೊಳ್ಳಬೇಕು. ಸಂಪೂರ್ಣ ಕಾರ್ಯಕ್ರಮವನ್ನು ಅಧಿಕಾರಿಗಳು ಮತ್ತು ಶಾಲಾ-ಕಾಲೇಜುಗಳ ಪ್ರಾಂಶುಪಾಲರ ನೇತೃತ್ವದಲ್ಲಿಯೇ ನಡೆಸಬೇಕು. ಆಯ್ಕೆಯಾಗುವ ಒಟ್ಟು ವಿದ್ಯಾರ್ಥಿಗಳಲ್ಲಿ ಶೇಕಡಾ 50 ರಷ್ಟು ಹುಡುಗಿಯರು ಹಾಗೂ ಶೇಕಡಾ 50 ರಷ್ಟು ಹುಡುಗರಿಗೆ ಕಡ್ಡಾಯವಾಗಿ ಅವಕಾಶ ನೀಡಬೇಕು ಎಂದು ಸೂಚಿಸಿದರು. ತಾಲೂಕಿನ ಸಮುದಾಯ ಭವನ ಅಥವಾ ಕಲ್ಯಾಣ ಮಂಟಪಗಳಲ್ಲಿ ವಿಧಾನಸಭೆ/ಸಂಸತ್ತಿನ ಮಾದರಿಯಲ್ಲಿ ಸ್ಪೀಕರ್ ಪೀಠ, ಉಪಸಭಾಪತಿ ಆಸನ, ಪ್ರೇಕ್ಷಕರ ಗ್ಯಾಲರಿ ಮತ್ತು ಮಾಧ್ಯಮ ಗ್ಯಾಲರಿಗಳ ವ್ಯವಸ್ಥೆ ಮಾಡಬೇಕು. ಚರ್ಚೆಗೆ ತಾಲೂಕಿಗೆ ಸಂಬಂಧಿಸಿದ 3 ಸ್ಥಳೀಯ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಯಾವುದೇ ಕಾರಣಕ್ಕೂ ವಿವಾದಾಸ್ಪದ ವಿಷಯಗಳನ್ನು ಚರ್ಚೆಗೆ ಎತ್ತಿಕೊಳ್ಳಬಾರದು. ಯುವ ಸಂಸತ್ತು ಸಭೆಯನ್ನು ಅಕ್ಟೋಬರ್ 10 ರೊಳಗೆ ಹಮ್ಮಿಕೊಳ್ಳಬೇಕು ಎಂದು ಅವರು ತಿಳಿಸಿದರು.

ತಾಲೂಕುಗಳಿಂದ ಆಯ್ಕೆಯಾದ ಅಭ್ಯರ್ಥಿಗಳೊಂದಿಗೆ ಅಕ್ಟೋಬರ್ 11 ರಿಂದ ಅಕ್ಟೋಬರ್ 30, 2026 ರ ನಡುವೆ ಜಿಲ್ಲಾ ಮಟ್ಟದ ಯುವ ಸಂಸತ್‌ನ್ನು ಆಯೋಜಿಸಲಾಗುವುದು. ಜಿಲ್ಲಾ ಮಟ್ಟದ ಯುವ ಸಂಸತ್‌ನಲ್ಲಿ ಪ್ರತಿಯೊಂದು ವಿಧಾನಸಭಾ ಕ್ಷೇತ್ರದಿಂದ ಒಬ್ಬೊಬ್ಬರಂತೆ (ಜಿಲ್ಲೆಯ 5 ವಿಧಾನಸಭಾ ಕ್ಷೇತ್ರಗಳಿಂದ 5 ಅತ್ಯುತ್ತಮ ವಿದ್ಯಾರ್ಥಿಗಳನ್ನು) ರಾಜ್ಯ ಮಟ್ಟದ ಯುವ ಸಂಸತ್‌ಗೆ ಆಯ್ಕೆ ಮಾಡಲಾಗುವುದು. ಜಿಲ್ಲಾ ಮಟ್ಟದಲ್ಲಿ ಅತ್ಯುತ್ತಮ ವಾದ-ಮಂಡನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರಥಮ, ದ್ವಿತೀಯ ಮತ್ತು ತೃತೀಯ ನಗದು ಪ್ರಶಸ್ತಿ/ಸನ್ಮಾನ ನೀಡಿ ಗೌರವಿಸಲಾಗುವುದು. ಅಧಿಕಾರಿಗಳು ಶಾಲಾ-ಕಾಲೇಜುಗಳಿಗೆ ವ್ಯಾಪಕ ಪ್ರಚಾರ ನೀಡಿ, ವಿದ್ಯಾರ್ಥಿಗಳಿಗೆ ಸಂವಿಧಾನ ಮತ್ತು ಸಂಸದೀಯ ಕಾರ್ಯವಿಧಾನದ ಕುರಿತು ವಕೀಲರ ಸಂಘ ಹಾಗೂ ರಾಜಕೀಯ ವಿಷಯ ಉಪನ್ಯಾಸಕರ ನೆರವಿನಿಂದ ಸೂಕ್ತ ತರಬೇತಿ ನೀಡುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದರು. ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಅಜ್ಜಪ್ಪ ಸೊಗಲದ ಮಾತನಾಡಿ, ನವೆಂಬರ್ 26 ರ ಸಂವಿಧಾನ ದಿನಾಚರಣೆಯಂದು ಎಲ್ಲಾ 224 ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾದ 224 ವಿದ್ಯಾರ್ಥಿಗಳನ್ನು ಒಳಗೊಂಡ ರಾಜ್ಯ ಮಟ್ಟದ ಯುವ ಸಂಸತ್ ಸಭೆಯನ್ನು ರಾಜ್ಯ ವಕೀಲರ ಸಂಘದ ಅಹಯೋಗದಲ್ಲಿ ಬೆಂಗಳೂರಿನಲ್ಲಿ ಆಯೋಜಿಸಲಾಗುವುದು ಎಂದು ಯುವ ಸಂಸತ್ ರಚನೆಯ ಹಂತಗಳ ಕುರಿತು ವಿವರಿಸಿದರು. ವಿಡಿಯೋ ಸಂವಾದದಲ್ಲಿ ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು, ವಕೀಲರ ಸಂಘದ ಪದಾಧಿಕಾರಿಗಳು, ನ್ಯಾಯಾಧೀಶರು ಸೇರಿದಂತೆ ಇತರರು ಭಾಗವಹಿಸಿದ್ದರು.

ಈ ನಮ್ಮ ಧೃತಿ ನ್ಯೂಸ್
E NAMMA DHURTHI NEWS
KANNADA DAILY NEWS PAPER

# ಬಳ್ಳಾರಿಯಲ್ಲಿ ಬಿಜೆಪಿ ಮರೆತ್ರಾ ನಾಯಕರು ಮೊಳಕಾಲ್ಮೂರಿನತ್ತ ಮುಖಮಾಡಿದ್ರಾ ಶ್ರೀರಾಮುಲು

## ಬಳ್ಳಾರಿ ರಾಜಕೀಯದಿಂದ ರಾಮುಲು ದೂರವೇ ಮೊಳಕಾಲ್ಮೂರು, ಕಂಪ್ಲಿ, , ಮಸ್ಕಿ ಕ್ಷೇತ್ರಗಳತ್ತಲೂ ಚಿತ್ತ. ಬಿಜೆಪಿ ಸಂಘಟನೆಯ ಮುಂದಿನ ಲೆಕ್ಕಾಚಾರವೇನು

ಬಳ್ಳಾರಿ: ಬಳ್ಳಾರಿ ಜಿಲ್ಲಾ ರಾಜಕಾರಣದಲ್ಲಿ ಬಿಜೆಪಿಯ ಮುಂದಿನ ನಡೆ ಏನು ಎಂಬ ಪ್ರಶ್ನೆ ಇದೀಗ ರಾಜಕೀಯ ವಲಯದಲ್ಲಿ ಮತ್ತೆ ಚರ್ಚೆಗೆ ಬಂದಿದೆ. ಒಂದು ಕಾಲದಲ್ಲಿ ಬಳ್ಳಾರಿ ಜಿಲ್ಲೆಯ ಬಿಜೆಪಿ ರಾಜಕಾರಣದ ಪ್ರಮುಖ ಮುಖವಾಗಿ ಕಾಣಿಸಿಕೊಂಡಿದ್ದ ಮಾಜಿ ಸಚಿವ ಹಾಗೂ ಹಿರಿಯ ಬಿಜೆಪಿ ನಾಯಕ ಬಿ. ಶ್ರೀರಾಮುಲು ಅವರ ರಾಜಕೀಯ ಚಟುವಟಿಕೆಗಳ ವ್ಯಾಪ್ತಿ ಇದೀಗ ಯಾವ ದಿಕ್ಕಿನತ್ತ ಸಾಗುತ್ತಿದೆ ಎಂಬುದು ಕುತೂಹಲಕ್ಕೆ ಕಾರಣವಾಗಿದೆ.

ಬಳ್ಳಾರಿ ಜಿಲ್ಲೆಯ ರಾಜಕೀಯದಲ್ಲಿ ಶ್ರೀರಾಮುಲು ಅವರ ಪಾತ್ರವನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಅವರು ಬಳ್ಳಾರಿ ಮಾತ್ರವಲ್ಲದೆ ಇತರ ಕ್ಷೇತ್ರಗಳ ರಾಜಕೀಯ ಚಟುವಟಿಕೆಗಳತ್ತಲೂ ಗಮನ ಹರಿಸುತ್ತಿರುವುದು ಹಲವು ರಾಜಕೀಯ ಚರ್ಚೆಗಳಿಗೆ ಕಾರಣವಾಗಿದೆ. ಇದರಿಂದಲೇ ಇದೀಗ ಕೇಳಿಬರುತ್ತಿರುವ ಪ್ರಶ್ನೆ?"ಬಳ್ಳಾರಿ ರಾಜಕೀಯಕ್ಕೆ ರಾಮುಲು ಅವರ ಆದ್ಯತೆ ಕಡಿಮೆಯಾಗಿದೆಯೇ.? ಮೊಳಕಾಲ್ಮೂರು ಸೇರಿದಂತೆ ಇತರೆ ಕ್ಷೇತ್ರಗಳತ್ತ ಹೊಸ ಲೆಕ್ಕಾಚಾರ ಆರಂಭವಾಗಿದೆಯೇ.?" ಬಳ್ಳಾರಿ ರಾಜಕೀಯದಿಂದ ರಾಮುಲು ದೂರ. ಇತ್ತೀಚೆಗೆ ನಡೆದ ಬಿಜೆಪಿ 'ಬಳ್ಳಾರಿ ಚಲೋ' ಪಾದಯಾತ್ರೆಯಲ್ಲಿ ಶ್ರೀರಾಮುಲು ಸಕ್ರಿಯವಾಗಿ ಭಾಗವಹಿಸಿದ್ದರು. ಸೆಪ್ಟೆಂಬರ್ 1ರಿಂದ ಆರಂಭವಾದ ಪಾದಯಾತ್ರೆ ಬಳ್ಳಾರಿಯಲ್ಲಿ ಅಂತ್ಯಗೊಳ್ಳುವಂತೆ ರೂಪಿಸಲಾಗಿತ್ತು ಮತ್ತು ಶ್ರೀರಾಮುಲು ಅದರ ಪ್ರಮುಖ ನಾಯಕರಲ್ಲಿ ಒಬ್ಬರಾಗಿದ್ದರು. ಹೀಗಾಗಿ ಶ್ರೀರಾಮುಲು ಸಂಪೂರ್ಣವಾಗಿ ಬಳ್ಳಾರಿ ರಾಜಕೀಯದಿಂದ ದೂರವಾಗಿದ್ದಾರೆ ಎನ್ನುವುದು ನೇರವಾಗಿ ಹೇಳಬಹುದಾದ ಸಂಗತಿಯಲ್ಲ. ಆದರೆ ಮತ್ತೊಂದೆಡೆ, ಮುಂದಿನ ಚುನಾವಣಾ ರಾಜಕೀಯದಲ್ಲಿ ಅವರು ಯಾವ ಕ್ಷೇತ್ರದ ಮೇಲೆ ಹೆಚ್ಚು ಗಮನ ಕೇಂದ್ರೀಕರಿಸಲಿದ್ದಾರೆ ಎಂಬ ಪ್ರಶ್ನೆ ಮಾತ್ರ ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿದೆ. ಇತ್ತೀಚಿನ ವರದಿಯೊಂದರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಮುಂದಿನ ವಿಧಾನಸಭಾ ಚುನಾವಣೆಗೆ ಕ್ಷೇತ್ರ ಆಯ್ಕೆ ಕುರಿತು ಚರ್ಚೆಗಳು ಆರಂಭವಾಗಿದ್ದು, "ಕಂಪ್ಲಿಗೆ ಶ್ರೀರಾಮುಲು, ಮೊಳಕಾಲ್ಮೂರಿಗೆ ಸುರೇಶ್ ಬಾಬು.?" ಎಂಬ ಸಾಧ್ಯತೆಗಳನ್ನೂ ರಾಜಕೀಯ ವಲಯದ ಚರ್ಚೆಯಾಗಿ ಉಲ್ಲೇಖಿಸಲಾಗಿದೆ. ಅಂದರೆ, ಶ್ರೀರಾಮುಲು ಅವರ ಮುಂದಿನ ರಾಜಕೀಯ ಹೆಜ್ಜೆ ಯಾವ ಕ್ಷೇತ್ರದತ್ತ ಎಂಬುದು ಇನ್ನೂ ಸ್ಪಷ್ಟವಾಗಿ ಘೋಷಣೆಯಾಗದಿದ್ದರೂ, ಕ್ಷೇತ್ರಗಳ ಕುರಿತ ಚರ್ಚೆಗಳು ಈಗಾಗಲೇ ಆರಂಭವಾಗಿವೆ.

ಮೊಳಕಾಲ್ಮೂರಿನತ್ತ ಮತ್ತೆ ದೃಷ್ಟಿ. ಶ್ರೀರಾಮುಲು ಅವರಿಗೆ ಮೊಳಕಾಲ್ಮೂರು ಕ್ಷೇತ್ರದ ರಾಜಕೀಯ ಹೊಸದಲ್ಲ. ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ಅವರು ಮೊಳಕಾಲ್ಮೂರು ಕ್ಷೇತ್ರದಿಂದ ಗೆಲುವು ಸಾಧಿಸಿದ್ದರು. 2023ರಲ್ಲಿ ಅವರು ಮೊಳಕಾಲ್ಮೂರು ಕ್ಷೇತ್ರದ ಬದಲು ಬಳ್ಳಾರಿ ಗ್ರಾಮೀಣ ಕ್ಷೇತ್ರದಿಂದ ಸ್ಪರ್ಧಿಸಿದ್ದರು.



ಹೀಗಾಗಿ ಮೊಳಕಾಲ್ಮೂರು ಮತ್ತು ಬಳ್ಳಾರಿ?- ಎರಡೂ ರಾಜಕೀಯವಾಗಿ ಅವರೊಂದಿಗೆ ಗಟ್ಟಿಯಾಗಿ ಸಂಪರ್ಕ ಹೊಂದಿರುವ ಕ್ಷೇತ್ರಗಳಾಗಿವೆ. ಇದೀಗ ಮೊಳಕಾಲ್ಮೂರು ಭಾಗದಲ್ಲಿ ಶ್ರೀರಾಮುಲು ಅವರ ಚಟುವಟಿಕೆಗಳು ಕಂಡುಬಂದರೆ, ಅದನ್ನು ಕೇವಲ ಸಾಮಾನ್ಯ ಕಾರ್ಯಕ್ರಮವೆಂದು ನೋಡಬೇಕೇ. ಅಥವಾ ಮುಂದಿನ ರಾಜಕೀಯ ಲೆಕ್ಕಾಚಾರದ ಭಾಗವೆಂದು ನೋಡಬೇಕೇ. ಎಂಬ ಚರ್ಚೆ ಸಹಜವಾಗಿಯೇ ಮೂಡುತ್ತಿದೆ. ಟ್ರ್ಯಾಕ್ಟರ್ ಚಾಲನೆ, ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿಕೆ, ಗಣೇಶೋತ್ಸವದಂತಹ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಳ್ಳುವುದು ಇವೆಲ್ಲವೂ ಸ್ಥಳೀಯ ರಾಜಕೀಯ ಸಂಪರ್ಕವನ್ನು ಬಲಪಡಿಸುವ ಪ್ರಯತ್ನವೇ.. ಎಂಬ ಪ್ರಶ್ನೆ ರಾಜಕೀಯ ವಲಯದಲ್ಲಿ ಕೇಳಿಬರುತ್ತಿದೆ. ಆದರೆ ಇದಕ್ಕೆ ಶ್ರೀರಾಮುಲು ಅವರಿಂದಲೇ ಸ್ಪಷ್ಟ ರಾಜಕೀಯ ಘೋಷಣೆ ಬಂದಿರುವವರೆಗೆ ಇದನ್ನು ಅಂತಿಮ ನಿರ್ಧಾರವೆಂದು ಪರಿಗಣಿಸಲು ಸಾಧ್ಯವಿಲ್ಲ. ಬಳ್ಳಾರಿ ಬಿಜೆಪಿ ಈಗ ಅಕ್ಷರಶಃ ಅನಾಥವೇ ಒಂದು ಕಾಲದಲ್ಲಿ ಬಳ್ಳಾರಿ ಎಂದರೆ ಬಿಜೆಪಿ ಮತ್ತು ಅದರ ಪ್ರಭಾವಿ ನಾಯಕರ ರಾಜಕೀಯಕ್ಕೆ ವಿಶೇಷ ಸ್ಥಾನವಿತ್ತು. ಬಳ್ಳಾರಿ ಜಿಲ್ಲೆಯ ವಿವಿಧ ಕ್ಷೇತ್ರಗಳಲ್ಲಿ ಪಕ್ಷದ ಸಂಘಟನೆ ಕಟ್ಟುವಲ್ಲಿ ಶ್ರೀರಾಮುಲು ಸೇರಿದಂತೆ ಹಲವು ನಾಯಕರು ಪ್ರಮುಖ ಪಾತ್ರ ವಹಿಸಿದ್ದರು.

ಇದೀಗ ಆ ಹಳೆಯ ಸಂಘಟನಾ ಬಲವನ್ನು ಮತ್ತೆ ಕಟ್ಟುವುದು ಬಿಜೆಪಿಗೆ ದೊಡ್ಡ ಸವಾಲಾಗಿದೆ. ಇತ್ತೀಚಿನ 'ಬಳ್ಳಾರಿ ಚಲೋ' ಪಾದಯಾತ್ರೆಯ ಮೂಲಕ ಬಿಜೆಪಿ ಜಿಲ್ಲೆಯಲ್ಲಿ ತನ್ನ ರಾಜಕೀಯ ಅಸ್ತಿತ್ವವನ್ನು ಪ್ರದರ್ಶಿಸಲು ಪ್ರಯತ್ನಿಸಿದೆ. ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ನಡೆದ ಪಾದಯಾತ್ರೆಯಲ್ಲಿ ಶ್ರೀರಾಮುಲು ಸೇರಿದಂತೆ ಹಲವು ಹಿರಿಯ ನಾಯಕರು ಭಾಗವಹಿಸಿದ್ದರು. ಹೀಗಿರುವಾಗ "ಬಳ್ಳಾರಿ ಬಿಜೆಪಿ ಸಂಪೂರ್ಣ ನಾಯಕತ್ವವಿಲ್ಲದೆ ಹೋಗಿದೆ" ಎಂದು ಹೇಳುವುದು ಅತಿರೇಕವಾಗಬಹುದು. ಆದರೆ, ಸ್ಥಳೀಯ ಮಟ್ಟದಲ್ಲಿ ಬಲಿಷ್ಠ, ನಿರಂತರ ಹಾಗೂ ಜನಸಂಪರ್ಕ ಹೊಂದಿರುವ ನಾಯಕತ್ವವನ್ನು ಯಾರು ಮುನ್ನಡೆಸುತ್ತಾರೆ ಎಂಬ ಪ್ರಶ್ನೆ ಮಾತ್ರ ಉಳಿದಿದೆ.



ಪಾದಯಾತ್ರೆ ಆಯ್ತು ಸಂಘಟನೆ ಎಷ್ಟು ಗಟ್ಟಿಯಾಯ್ತು. ಬಿಜೆಪಿ 'ಬಳ್ಳಾರಿ ಚಲೋ' ಪಾದಯಾತ್ರೆ ದೊಡ್ಡ ರಾಜಕೀಯ ಕಾರ್ಯಕ್ರಮವಾಗಿ ನಡೆದಿದ್ದರೂ, ಅದರ ನಂತರದ ಸಂಘಟನಾ ಚಟುವಟಿಕೆಗಳೇ ಪಕ್ಷದ ನಿಜವಾದ ಶಕ್ತಿಯನ್ನು ತೋರಿಸಬೇಕಿದೆ. ಪಾದಯಾತ್ರೆಯಲ್ಲಿ ರಾಜ್ಯಮಟ್ಟದ ನಾಯಕರು ಭಾಗವಹಿಸುವುದು ಒಂದು ವಿಚಾರ. ಆದರೆ ಗ್ರಾಮ, ಹೋಬಳಿ, ತಾಲೂಕು ಮಟ್ಟದಲ್ಲಿ ಕಾರ್ಯಕರ್ತರನ್ನು ಸಕ್ರಿಯಗೊಳಿಸುವುದು, ಸ್ಥಳೀಯ ಸಮಸ್ಯೆಗಳಿಗೆ ಸ್ಪಂದಿಸುವುದು ಮತ್ತು ನಿರಂತರ ಜನಸಂಪರ್ಕ ನಡೆಸುವುದು ಮತ್ತೊಂದು ವಿಚಾರ. ಇದೇ ಕಾರಣಕ್ಕೆ ಬಳ್ಳಾರಿ ಜಿಲ್ಲೆಯ ರಾಜಕೀಯ ವಲಯದಲ್ಲಿ ಈಗ ಕೇಳಿಬರುತ್ತಿರುವ ಪ್ರಶ್ನೆ: "ಪಾದಯಾತ್ರೆ ನಡೆದರೂ ಬಳ್ಳಾರಿಯಲ್ಲಿ ಬಿಜೆಪಿಗೆ ಅದು ಎಷ್ಟು ವರ್ಕೌಟ್ ಆಗಲಿದೆ..?" ಈ ಪ್ರಶ್ನೆಗೆ ಉತ್ತರವನ್ನು ಮುಂದಿನ ದಿನಗಳ ಸಂಘಟನಾ ಚಟುವಟಿಕೆಗಳು ನೀಡಬೇಕಿದೆ. ರಾಮುಲು ಮತ್ತೆ ಬಳ್ಳಾರಿಯತ್ತ ಮುಖಮಾಡಿದರಾ.? ಇನ್ನೊಂದು ಕಡೆ, 'ಬಳ್ಳಾರಿ ಚಲೋ' ಸಂದರ್ಭದಲ್ಲಿ ಶ್ರೀರಾಮುಲು ಬಳ್ಳಾರಿ ಜಿಲ್ಲೆಯ ಹಲವು ಭಾಗಗಳಲ್ಲಿ ಕಾಣಿಸಿಕೊಂಡಿದ್ದಾರೆ. ಪಾದಯಾತ್ರೆಯ ವೇಳೆ ಅವರು ಬಿಜೆಪಿ ರಾಜ್ಯ ನಾಯಕರೊಂದಿಗೆ ಭಾಗವಹಿಸಿದ್ದು, ಬಳ್ಳಾರಿ ಜಿಲ್ಲೆಯ ರಾಜಕೀಯ ವಿಚಾರಗಳ ಕುರಿತು ಹೇಳಿಕೆಗಳನ್ನೂ ನೀಡಿದ್ದಾರೆ.

ಹೀಗಾಗಿ ರಾಮುಲು ಬಳ್ಳಾರಿಯನ್ನು ಸಂಪೂರ್ಣವಾಗಿ ಬಿಟ್ಟಿದ್ದಾರೆ ಎಂಬ ಚಿತ್ರಣವೂ ಸರಿಯಾಗುವುದಿಲ್ಲ. ಆದರೆ ರಾಜಕೀಯ ನಾಯಕರು ಒಂದೇ ಸಮಯದಲ್ಲಿ ಹಲವು ಕ್ಷೇತ್ರಗಳ ಮೇಲೆ ಗಮನ ಹರಿಸುವುದು ಸಾಮಾನ್ಯ. ಅದರಂತೆ, ಮೊಳಕಾಲ್ಮೂರು ಮಾತ್ರವಲ್ಲದೆ ಕಂಪ್ಲಿ, , ಮಸ್ಕಿ ಸೇರಿದಂತೆ ವಿವಿಧ ಕ್ಷೇತ್ರಗಳತ್ತಲೂ ಅವರ ರಾಜಕೀಯ ಸಂಪರ್ಕ ವಿಸ್ತರಿಸುತ್ತಿದೆಯೇ. ಎಂಬುದು ಕುತೂಹಲ ಮೂಡಿಸಿದೆ. ಕಂಪ್ಲಿಯಲ್ಲೂ ಹೆಸರು ಕೇಳಿಬರುತ್ತಿದೆಯೇ..! ಬಳ್ಳಾರಿ ಜಿಲ್ಲೆಯ ರಾಜಕೀಯದಲ್ಲಿ ಕಂಪ್ಲಿ ಕ್ಷೇತ್ರವೂ ಮಹತ್ವದ ಸ್ಥಾನ ಹೊಂದಿದೆ. ಇತ್ತೀಚಿನ ರಾಜಕೀಯ ಚರ್ಚೆಗಳಲ್ಲಿ ಕಂಪ್ಲಿ ಕ್ಷೇತ್ರಕ್ಕೆ ಶ್ರೀರಾಮುಲು ಅವರ ಹೆಸರನ್ನು ಜೋಡಿಸಿ ಸಾಧ್ಯತೆಗಳ ಕುರಿತು ಚರ್ಚೆ ನಡೆದಿರುವುದನ್ನು ಮಾಧ್ಯಮ ವರದಿಯೂ ಉಲ್ಲೇಖಿಸಿದೆ. ಇದು ಅಧಿಕೃತ ಅಭ್ಯರ್ಥಿತ್ವ ಘೋಷಣೆ ಅಲ್ಲ. ಆದರೆ ಇಂತಹ ಚರ್ಚೆಗಳು ಆರಂಭವಾಗಿರುವುದೇ ಮುಂದಿನ ಚುನಾವಣೆಯ ಕ್ಷೇತ್ರವಾರು ರಾಜಕೀಯ ಲೆಕ್ಕಾಚಾರಗಳು ಈಗಿನಿಂದಲೇ ಚುರುಕುಗೊಳ್ಳುತ್ತಿರುವುದಕ್ಕೆ ಸೂಚನೆಯಾಗಿದೆ. ಮಸ್ಕಿಯತ್ತಲೂ ರಾಜಕೀಯ ಕಣ್ಣು. ಬಳ್ಳಾರಿ ಜಿಲ್ಲೆಯ ಸುತ್ತಮುತ್ತಲಿನ ರಾಜಕೀಯದಲ್ಲಿ ಕಂಪ್ಲಿ, ಸಂಡೂರು ಮುಂತಾದ ಕ್ಷೇತ್ರಗಳು ಎಸ್‌ಟಿ ಮೀಸಲು ಹಾಗೂ ಪ್ರಾದೇಶಿಕ ರಾಜಕೀಯ ಸಮೀಕರಣಗಳ ದೃಷ್ಟಿಯಿಂದ ಪ್ರಮುಖವಾಗಿವೆ. ಶ್ರೀರಾಮುಲು ಅವರ ರಾಜಕೀಯ ಪ್ರಭಾವವೂ ಈ ಭಾಗದಲ್ಲಿ ಚರ್ಚೆಗೆ ಒಳಗಾಗುತ್ತಲೇ ಬಂದಿದೆ. ಆದರೆ ಯಾವ ಕ್ಷೇತ್ರದಲ್ಲಿ ಸ್ಪರ್ಧಿಸುತ್ತಾರೆ, ಯಾರನ್ನು ಬೆಂಬಲಿಸುತ್ತಾರೆ ಅಥವಾ ಯಾವ ಕ್ಷೇತ್ರವನ್ನು ಸಂಘಟನೆಯ ಕೇಂದ್ರವನ್ನಾಗಿ ಮಾಡುತ್ತಾರೆ ಎಂಬುದು ಪಕ್ಷದ ಅಧಿಕೃತ ನಿರ್ಧಾರ ಹಾಗೂ ಅವರ ಸ್ವಂತ ರಾಜಕೀಯ ಘೋಷಣೆಯ ಮೇಲೆ ಅವಲಂಬಿತವಾಗಿದೆ. ಹೀಗಾಗಿ ಈಗ ನಡೆಯುತ್ತಿರುವ ಚರ್ಚೆಗಳನ್ನು ಅಂತಿಮ ನಿರ್ಧಾರವೆಂದು ನೋಡುವುದಕ್ಕಿಂತ, ಮುಂದಿನ ಚುನಾವಣಾ ಪೂರ್ವ ರಾಜಕೀಯ ಚಲನೆಗಳ ಸೂಚನೆ ಎಂದು ನೋಡುವುದು ಸೂಕ್ತ. ಬಿಜೆಪಿಗೆ ನಿಜವಾದ ಸವಾಲು ನಾಯಕತ್ವವೇ.

ಬಳ್ಳಾರಿಯಲ್ಲಿ ಬಿಜೆಪಿಗೆ ಈಗ ಎದುರಾಗಿರುವ ಪ್ರಶ್ನೆ ಕೇವಲ ಒಬ್ಬ ನಾಯಕ ಯಾವ ಕ್ಷೇತ್ರಕ್ಕೆ ಹೋಗುತ್ತಾರೆ ಎಂಬುದಲ್ಲ. ಪಕ್ಷದ ಜಿಲ್ಲಾಮಟ್ಟದ ಸಂಘಟನೆ ಯಾರು ಮುನ್ನಡೆಸುತ್ತಾರೆ.? ಕಾರ್ಯಕರ್ತರನ್ನು ಯಾರು ಒಗ್ಗೂಡಿಸುತ್ತಾರೆ.? ಪ್ರತಿ ಕ್ಷೇತ್ರದಲ್ಲಿ ಪಕ್ಷದ ನೆಲಮಟ್ಟದ ನಾಯಕತ್ವವನ್ನು ಯಾರು ಬೆಳೆಸುತ್ತಾರೆ. ಮುಂದಿನ ಚುನಾವಣೆಗೆ ಮುನ್ನ ಬಿಜೆಪಿ ತನ್ನ ಹಳೆಯ ಪ್ರಭಾವವನ್ನು ಹೇಗೆ ಮರುಸಂಘಟಿಸಿಕೊಳ್ಳಲಿದೆ.? ಇವೇ ಮೂಲ ಪ್ರಶ್ನೆಗಳು. ಬಿಜೆಪಿ ರಾಜ್ಯ ನಾಯಕತ್ವ ಬಳ್ಳಾರಿ ಭಾಗದಲ್ಲಿ ಪಾದಯಾತ್ರೆ ಮೂಲಕ ರಾಜಕೀಯ ಚಟುವಟಿಕೆಗೆ ಚಾಲನೆ ನೀಡಿದೆ. ಶ್ರೀರಾಮುಲು, ವಿಜಯೇಂದ್ರ ಸೇರಿದಂತೆ ಹಲವು ನಾಯಕರು ಅದರಲ್ಲಿ ಭಾಗವಹಿಸಿದ್ದಾರೆ. ಆದರೆ ಕಾರ್ಯಕ್ರಮ ಮುಗಿದ ನಂತರವೂ ಅದೇ ಮಟ್ಟದ ಸಂಘಟನಾ ಚಟುವಟಿಕೆ ಮುಂದುವರಿಯುತ್ತದೆಯೇ ಎಂಬುದು ಕುತೂಹಲ. ರಾಮುಲು ಅವರ ಮುಂದಿನ ನಡೆ ಏನು. ಶ್ರೀರಾಮುಲು ಅವರ ಮುಂದಿನ ರಾಜಕೀಯ ಹೆಜ್ಜೆ ಇದೀಗ ಬಳ್ಳಾರಿ ಜಿಲ್ಲೆಯ ರಾಜಕೀಯ ವಲಯದಲ್ಲಿ ಪ್ರಮುಖ ಚರ್ಚೆಯ ವಿಷಯವಾಗಿದೆ. ಬಳ್ಳಾರಿಯಲ್ಲೇ ಮುಂದುವರಿಯುತ್ತಾರಾ.
ಮೊಳಕಾಲ್ಮೂರಿನತ್ತ ಮತ್ತೆ ಸಂಪೂರ್ಣ ಗಮನ ಹರಿಸುತ್ತಾರಾ. ಕಂಪ್ಲಿಯತ್ತ ಹೆಜ್ಜೆ ಇಡುತ್ತಾರಾ.? ಅಥವಾ ಬಳ್ಳಾರಿ ಚಿತ್ರದುರ್ಗ?ವಿಜಯನಗರ ಭಾಗಗಳನ್ನು ಒಳಗೊಂಡ ವಿಶಾಲ ರಾಜಕೀಯ ಸಂಘಟನೆಯತ್ತ ಗಮನ ಕೊಡುತ್ತಾರಾ. ಈ ಪ್ರಶ್ನೆಗಳಿಗೆ ಈಗಲೇ ಅಂತಿಮ ಉತ್ತರ ನೀಡಲು ಸಾಧ್ಯವಿಲ್ಲ. ಆದರೆ ಒಂದು ಸಂಗತಿ ಮಾತ್ರ ಸ್ಪಷ್ಟ?ಮುಂದಿನ ವಿಧಾನಸಭಾ ಚುನಾವಣೆಗೆ ಇನ್ನೂ ಸಮಯವಿದ್ದರೂ ಬಳ್ಳಾರಿ ಮೊಳಕಾಲ್ಮೂರು ಭಾಗದ ರಾಜಕೀಯದಲ್ಲಿ ಕ್ಷೇತ್ರವಾರು ಲೆಕ್ಕಾಚಾರಗಳು ಈಗಲೇ ಆರಂಭವಾಗಿವೆ. ಶ್ರೀರಾಮುಲು ಅವರ ಪ್ರತಿಯೊಂದು ರಾಜಕೀಯ ಹೆಜ್ಜೆಯೂ ಈ ಭಾಗದ ಬಿಜೆಪಿ ಸಂಘಟನೆ ಹಾಗೂ ಮುಂದಿನ ಚುನಾವಣಾ ತಂತ್ರಗಾರಿಕೆಯ ಮೇಲೆ ಗಮನ ಸೆಳೆಯುವುದು ಸಹಜ. ಬಳ್ಳಾರಿಯಲ್ಲಿ ಬಿಜೆಪಿ ನಾಯಕತ್ವದ ಪ್ರಶ್ನೆ ಇನ್ನೂ ಜೀವಂತವಾಗಿರುವಾಗ, ಶ್ರೀರಾಮುಲು ಅವರ ರಾಜಕೀಯ ದೃಷ್ಟಿ ಯಾವ ಕ್ಷೇತ್ರದತ್ತ ನೆಲೆಯಾಗಲಿದೆ ಎಂಬುದೇ ಈಗಿನ ದೊಡ್ಡ ಕುತೂಹಲ. ಒಟ್ಟಿನಲ್ಲಿ

ಬಳ್ಳಾರಿಯಲ್ಲಿ ಬಿಜೆಪಿ ಮುನ್ನಡೆಸುವ ನಾಯಕತ್ವ ಯಾರು..? ಶ್ರೀರಾಮುಲು ಅವರ ಮುಂದಿನ ರಾಜಕೀಯ ನೆಲೆ ಯಾವುದು..? ಮೊಳಕಾಲ್ಮೂರು ಮತ್ತೆ ಅವರ ರಾಜಕೀಯ ಕೇಂದ್ರವಾಗುತ್ತದೆಯೇ.? ಕಂಪ್ಲಿ?ಮಸ್ಕಿಯತ್ತಲೂ ಹೊಸ ಲೆಕ್ಕಾಚಾರವೇ..? ಈ ಪ್ರಶ್ನೆಗಳಿಗೆ ಮುಂದಿನ ದಿನಗಳ ರಾಜಕೀಯ ಚಟುವಟಿಕೆಗಳೇ ಉತ್ತರ ನೀಡಲಿವೆ.

# ತಮಿಳುನಾಡಿನಲ್ಲಿ ಖಾಸಗಿ ಬಸ್ ಮಾಲೀಕರ ಮುಷ್ಕರ

ಚೆನ್ನೈ: ಪ್ರಯಾಣ ದರ ಪರಿಷ್ಕರಣೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ತಮಿಳುನಾಡಿನ ಖಾಸಗಿ ಬಸ್‌ಗಳ ಮಾಲೀಕರು ಸೆ.29ರ ಮಧ್ಯರಾತ್ರಿಯಿಂದ 24 ಗಂಟೆಗಳ ಸಾಂಕೇತಿಕ ಮುಷ್ಕರ ನಡೆಸಲು ನಿರ್ಧರಿಸಿದ್ದಾರೆ.



ಚೆನ್ನೈ, ಮದುರೈ, ನಾಗರ್‌ಕೋಯಿಲ್ ಮತ್ತು ಊಟಿಯ ಖಾಸಗಿ ಬಸ್‌ಗಳು ಮುಷ್ಕರದಿಂದ ಹೊರಗುಳಿಯಲಿವೆ. ತಮಿಳುನಾಡು ಬಸ್ ಆಪರೇಟರ್‌ಗಳ ಒಕ್ಕೂಟದ ಪ್ರಕಾರ ರಾಜ್ಯದಲ್ಲಿ ಸುಮಾರು 7,000 ಖಾಸಗಿ ಬಸ್‌ಗಳು ಸಂಚರಿಸುತ್ತಿವೆ. ಡೀಸೆಲ್ ಹಾಗೂ ಬಿಡಿಭಾಗಗಳ ಬೆಲೆ ಏರಿಕೆಯಿಂದ ಖಾಸಗಿ ಬಸ್‌ಗಳ ನಿರ್ವಹಣೆ ಕಷ್ಟಕರವಾಗಿದೆ. 2018ರಲ್ಲಿ ಡೀಸೆಲ್ ದರ ಲೀಟರ್‌ಗೆ 64 ಇದ್ದಾಗ ಪ್ರಯಾಣ ದರವನ್ನು ಕೊನೆಯದಾಗಿ ಪರಿಷ್ಕರಿಸಲಾಗಿತ್ತು. ಇದೀಗ ಡೀಸೆಲ್ ಬೆಲೆ 100ಕ್ಕಿಂತ ಹೆಚ್ಚಾಗಿದೆ. ಪ್ರಸ್ತುತ ಸುಮಾರು ಶೇ.65ರಷ್ಟು ನಷ್ಟದಲ್ಲಿ ಬಸ್‌ಗಳನ್ನು ನಿರ್ವಹಿಸಲಾಗುತ್ತಿದೆ. ಪ್ರಯಾಣ ದರ ಪರಿಷ್ಕರಿಸದಿದ್ದರೆ ಖಾಸಗಿ ಬಸ್‌ಗಳ ವಲಯ ಅಸ್ತಿತ್ವ ಕಳೆದುಕೊಳ್ಳಲಿದೆ ಎಂದು ಒಕ್ಕೂಟದ ಅಧ್ಯಕ್ಷ ತಂಗರಾಜ್ ತಿಳಿಸಿದ್ದಾರೆ. ಪ್ರಯಾಣ ದರ ಪರಿಷ್ಕರಣೆ ಕುರಿತು ಕಳೆದ ವರ್ಷ ಮಾರ್ಚ್‌ನಲ್ಲಿ ಮದ್ರಾಸ್ ಹೈಕೋರ್ಟ್ ಸರ್ಕಾರಕ್ಕೆ ಬಸ್ ನಿರ್ವಾಹಕರು ಹಾಗೂ ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹಿಸುವಂತೆ ಸೂಚಿಸಿತ್ತು. ಆದರೆ ಬಳಿಕ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಖಾಸಗಿ ಬಸ್ ಮಾಲೀಕರು ಆರೋಪಿಸಿದ್ದಾರೆ. ಅಕ್ಟೋಬರ್ 2ರಿಂದ ವಿಸ್ತರಿಸಲು ಉದ್ದೇಶಿಸಿರುವ ಮಹಿಳೆಯರ ಉಚಿತ ಪ್ರಯಾಣ ಯೋಜನೆಗೂ ಖಾಸಗಿ ಬಸ್ ಮಾಲೀಕರು ವಿರೋಧ ವ್ಯಕ್ತಪಡಿಸಿದ್ದಾರೆ. ಸರ್ಕಾರಿ ಸಾರಿಗೆ ಸಂಸ್ಥೆಗಳಿಗೆ ಯೋಜನೆ ಜಾರಿಗೆ ಸಬ್ಸಿಡಿ ನೀಡಲಾಗುತ್ತಿದ್ದು, ಖಾಸಗಿ ಬಸ್‌ಗಳಿಗೆ ಪರಿಹಾರ ನೀಡಲಾಗುತ್ತಿಲ್ಲ ಎಂದು ಅವರು ಹೇಳಿದ್ದಾರೆ. ಖಾಸಗಿ ಬಸ್‌ಗಳಿಗೂ ಯೋಜನೆ ವಿಸ್ತರಿಸಿ, ನಷ್ಟಕ್ಕೆ ಸರ್ಕಾರ ಸಬ್ಸಿಡಿ ನೀಡಬೇಕು ಎಂದು ಒತ್ತಾಯಿಸಿದ್ದಾರೆ. ಮುಷ್ಕರ ಸೆ.29ರ ಮಧ್ಯರಾತ್ರಿಯಿಂದ ಸೆ.30ರ ಮಧ್ಯರಾತ್ರಿವರೆಗೆ ನಡೆಯಲಿದೆ.

# ಮಾನವನಿಂದ ಮಾನವನ ಶೋಷಣೆ ಕೊನೆಯಾಗುವವರೆಗೂ ನಿಜವಾದ ಸ್ವಾತಂತ್ರ್ಯ ಸಾಧ್ಯವಿಲ್ಲ: ಭಗತ್ ಸಿಂಗ್ ಹೊಸಪೇಟೆಯಲ್ಲಿ ಕ್ರಾಂತಿಕಾರಿ ಭಗತ್ ಸಿಂಗ್ ಅವರ 119ನೇ ಜನ್ಮದಿನಾಚರಣೆ : ವಿದ್ಯಾರ್ಥಿ-ಯುವಜನರ ಒಗ್ಗಟ್ಟಿಗೆ AIDSO ಕರೆ

ಹೊಸಪೇಟೆ: "ಕೇವಲ ಬಿಳಿಯ ಬ್ರಿಟಿಷ್ ದೊರೆಗಳು ತೊಲಗಿ, ಅವರ ಜಾಗಕ್ಕೆ ದೇಶಿ ಬಂಡವಾಳಶಾಹಿಗಳು ಬಂದು ಅಧಿಕಾರ ಹಿಡಿದರೆ ಅದು ಜನಸಾಮಾನ್ಯರ ನಿಜವಾದ ಸ್ವಾತಂತ್ರ್ಯವಾಗಲಾರದು. ಎಲ್ಲಿಯವರೆಗೆ ಮಾನವನಿಂದ ಮಾನವನ ಶೋಷಣೆ ಸಂಪೂರ್ಣವಾಗಿ ಕೊನೆಗೊಳ್ಳುವುದಿಲ್ಲವೋ, ಅಲ್ಲಿಯವರೆಗೆ ಕ್ರಾಂತಿ ಅಪೂರ್ಣ ಮತ್ತು ದೇಶದ ಕಟ್ಟಕಡೆಯ ಮನುಷ್ಯನಿಗೆ ಸ್ವಾತಂತ್ರ್ಯದ ಬೆಳಕು ಮುಟ್ಟಲು ಸಾಧ್ಯವಿಲ್ಲ" ಎಂಬ ಕ್ರಾಂತಿಕಾರಿ ಭಗತ್ ಸಿಂಗ್ ಅವರ ಸಾರ್ವಕಾಲಿಕ ಎಚ್ಚರಿಕೆಯನ್ನು ಇಂದಿನ ವಿದ್ಯಾರ್ಥಿ ಮತ್ತು ಯುವಸಮುದಾಯ ಬದುಕಿನ ಉಸಿರಾಗಿಸಿಕೊಂಡು ಮುನ್ನಡೆಯಬೇಕಿದೆ ಎಂದು ೦ಖಆಖಔ ಜಿಲ್ಲಾ ಅಧ್ಯಕ್ಷರಾದ ರವಿಕಿರಣ್ ಜೆ.ಪಿ. ಅವರು ಕರೆ ನೀಡಿದರು.

ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಅವರ 119ನೇ ಜನ್ಮದಿನಾಚರಣೆಯ ಅಂಗವಾಗಿ, ಆಲ್ ಇಂಡಿಯಾ ಡೆಮಾಕ್ರೆಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (AIDSO) ವತಿಯಿಂದ ನಗರದ ಕ್ರೀಡಾಂಗಣದಲ್ಲಿ ಹಾಗೂ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು, ಕ್ರೀಡಾಪಟುಗಳು ಮತ್ತು ಯುವಜನರ ಉಪಸ್ಥಿತಿಯಲ್ಲಿ ಕಾರ್ಯಕ್ರಮಗಳನ್ನು ನಡೆಸಲಾಯಿತು. ಕಾರ್ಯಕ್ರಮವನ್ನುದ್ದೇಶಿಸಿ ವಿಸ್ತೃತವಾಗಿ ಮಾತನಾಡಿದ ರವಿಕಿರಣ್ ಜೆ.ಪಿ. ಅವರು, "ಇಂದಿನ ಪೀಳಿಗೆಗೆ ಭಗತ್ ಸಿಂಗ್ ಎಂದರೆ ಕೇವಲ ಬಂದೂಕು ಹಿಡಿದು ನಿಂತ ಸಾಹಸಿ ಅಥವಾ ಬಾಂಬ್ ಎಸೆದ ಕ್ಷಣ ಮಾತ್ರ ನೆನಪಿಗೆ ಬರುತ್ತದೆ. ಆದರೆ, ಭಗತ್ ಸಿಂಗ್ ಅವರ ಅತಿ ದೊಡ್ಡ ಶಕ್ತಿಯಾಗಿದ್ದುದು ಅವರ ಕೈಯಲ್ಲಿದ್ದ ಪುಸ್ತಕಗಳು ಮತ್ತು ಜೀವಪರ ವೈಚಾರಿಕ ಪ್ರಜ್ಞೆ, ತಮ್ಮ ಕೇವಲ 23 ವರ್ಷಗಳ ಅಲ್ಪಾಯುಷ್ಯದಲ್ಲೇ, ಗಲ್ಲಿಗೇರುವ ಕೊನೆ ಗಳಿಗೆಯಲ್ಲೂ ಜೈಲಿನ ಕತ್ತಲೆಯ ಕೋಣೆಯಲ್ಲಿ ನೂರಾರು ವಿಶ್ವಶ್ರೇಷ್ಠ ಕೃತಿಗಳನ್ನು ಓದಿ ನೋಟ್ಸ್ ಬರೆದಿಟ್ಟುಕೊಂಡಿದ್ದ




ಅಪರೂಪದ ಅಧ್ಯಯನಶೀಲ ಯುವನಾಯಕ ಅವರು. 'ಕ್ರಾಂತಿಯ ಕತ್ತಿಯನ್ನು ವಿಚಾರಗಳ ಸಾಣೆಕಲ್ಲಿನ ಮೇಲೆ ಹರಿತಗೊಳಿಸಬೇಕು' ಎಂದು ಸಾರಿದ ಅವರ ಬದುಕು ನಮಗೆಲ್ಲರಿಗೂ ಸದಾ ದಾರಿದೀಪ" ಎಂದರು.

"ಭಾರತದ ಸ್ವಾತಂತ್ರ್ಯ ಹೋರಾಟದ ಚರಿತ್ರೆಯಲ್ಲಿ ಎರಡು ಪ್ರಮುಖ ಪಂಥಗಳಿದ್ದವು. ಒಂದು ಗಾಂಧೀಜಿಯವರ ನೇತೃತ್ವದ ರಾಜಿ ಸಂಧಾನದ ಹಾದಿಯಾದರೆ, ಮತ್ತೊಂದು ಭಗತ್ ಸಿಂಗ್, ಸುಭಾಷ್ ಚಂದ್ರ ಬೋಸ್, ಚಂದ್ರಶೇಖರ್ ಆಜಾದ್, ರಾಮಪ್ರಸಾದ್ ಬಿಸ್ಮಿಲ್ ಅವರನ್ನೊಳಗೊಂಡ ರಾಜಿರಹಿತ ಕ್ರಾಂತಿಕಾರಿ ಹಾದಿ. ಬ್ರಿಟಿಷರೊಂದಿಗೆ ಅಧಿಕಾರ ಹಸ್ತಾಂತರದ ಸಂಧಾನಕ್ಕೆ ಸೀಮಿತವಾಗದೆ, ಸಮಾಜವಾದಿ ಸಮಾಜ ನಿರ್ಮಾಣದ ಮೂಲಕ ಸಂಪತ್ತು ಶ್ರಮಿಕ ವರ್ಗಕ್ಕೆ ದಕ್ಕಬೇಕೆಂಬ ಆರ್ಥಿಕ-ಸಾಮಾಜಿಕ ಸಮಾನತೆಯನ್ನು ಭಗತ್ ಸಿಂಗ್ ಪ್ರತಿಪಾದಿಸಿದರು. ಗವರ್ನರ್‌ಗೆ ಬರೆದ ಪತ್ರದಲ್ಲಿ 'ನಾವು ಯುದ್ಧಖೈದಿಗಳು, ನಮ್ಮನ್ನು ನೇಣಿಗೇರಿಸುವ ಬದಲು ನಿಯಮದಂತೆ ಗುಂಡಿಕ್ಕಿ ಕೊಲ್ಲಿ' ಎಂದು ಸಾವಿನ ಕಣ್ಣಲ್ಲೂ ಕಣ್ಣಿಟ್ಟು ದಿಟ್ಟ ಸವಾಲು ಹಾಕಿದ ಅಪ್ರತಿಮ ದೇಶಪ್ರೇಮಿ ಅವರು" ಎಂದು ಬಣ್ಣಿಸಿದರು. "ಇಂದು ವಿದ್ಯಾರ್ಥಿಗಳನ್ನು ಸಮಾಜದ ವಾಸ್ತವಿಕ ಸಮಸ್ಯೆಗಳಿಂದ ವಿಮುಖರನ್ನಾಗಿಸಲು 'ವಿದ್ಯಾರ್ಥಿಗಳಿಗೆ ಸಾಮಾಜಿಕ ಕಳಕಳಿ ಏಕೆ ಬೇಕು, ಕೇವಲ ಪರೀಕ್ಷೆ ಬರೆದು ಅಂಕ ಗಳಿಸಿ' ಎಂದು ವ್ಯವಸ್ಥಿತವಾಗಿ ದಾರಿ ತಪ್ಪಿಸಲಾಗುತ್ತಿದೆ. ಆದರೆ 1928ರಲ್ಲೇ ಬರೆದ 'ವಿದ್ಯಾರ್ಥಿಗಳು ಮತ್ತು ರಾಜಕೀಯ' ಲೇಖನದಲ್ಲಿ ಭಗತ್ ಸಿಂಗ್ ಅವರು, 'ವಿದ್ಯಾರ್ಥಿಗಳು ಸಮಾಜದ ಜಾಗೃತ ಕಣ್ಣುಗಳು. ಅನ್ಯಾಯ, ಶೋಷಣೆ ಮತ್ತು ತಾರತಮ್ಯಗಳನ್ನು ಗುರುತಿಸಿ ಧ್ವನಿ ಎತ್ತುವ ವಿವೇಕ ಯುವಜನತೆಗೆ ಇಲ್ಲದಿದ್ದರೆ ಆ ದೇಶದ ಭವಿಷ್ಯ ಕತ್ತಲೆಯಾಗುತ್ತದೆ' ಎಂದು ಸ್ಪಷ್ಟವಾಗಿ ಕರೆ ನೀಡಿದ್ದರು. ವಿದ್ಯಾರ್ಥಿ ಎಂದರೆ ಕೇವಲ ಅಂಕ ಗಳಿಸುವ ಕಾರ್ಖಾನೆಯ ಯಂತ್ರವಾಗದೆ, ಸಮಾಜಮುಖಿ ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳಬೇಕು" ಎಂದು ಕಿವಿಮಾತು ಹೇಳಿದರು.

"ಧರ್ಮದ ಹೆಸರಿನಲ್ಲಿ ಜನರನ್ನು ಎತ್ತಿಕಟ್ಟುವ ಕೋಮು ವೈಷಮ್ಯದ ಹುನ್ನಾರಗಳ ವಿರುದ್ಧ ಭಗತ್ ಸಿಂಗ್ ದಿಟ್ಟ ನಿಲುವು ಹೊಂದಿದ್ದರು. ಧರ್ಮವನ್ನು ವೈಯಕ್ತಿಕ ನಂಬಿಕೆಗೆ ಸೀಮಿತಗೊಳಿಸಿ, ರಾಜಕೀಯ ಮತ್ತು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಿಂದ ಅದನ್ನು ಸಂಪೂರ್ಣ ಪ್ರತ್ಯೇಕಿಸಬೇಕೆಂದು ಪ್ರತಿಪಾದಿಸಿದರು. ಬಡತನ, ನಿರುದ್ಯೋಗ ಮತ್ತು ಅನಕ್ಷರತೆಗಳು ಎಲ್ಲಾ ಧರ್ಮದ ಜನಸಾಮಾನ್ಯರ ನಿಜವಾದ ಶತ್ರುಗಳಾಗಿದ್ದು, ಅವುಗಳ ವಿರುದ್ಧ ಒಗ್ಗಟ್ಟಾಗಿ ನಿಲ್ಲಬೇಕಾದ ಜನರನ್ನು ಕೋಮು ದ್ವೇಷದ ಮೂಲಕ ಒಡೆದು ಆಳಲಾಗುತ್ತಿದೆ ಎಂದು ಎಚ್ಚರಿಸಿದ್ದರು. ಜೊತೆಗೆ, ಅಸ್ಪೃಶ್ಯತೆಯ ಅನಿಷ್ಟವನ್ನು ಖಂಡಿಸಿ, ದುಡಿಯುವ ಶ್ರಮಿಕ ಮತ್ತು ದಲಿತ ವರ್ಗಗಳೇ ದೇಶದ ನಿಜವಾದ ಶಕ್ತಿ ಎಂದು ಸಾರಿದ್ದರು" ಎಂದು ವಿವರಿಸಿದರು. "ಇಂದು ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ಕಡೆಗಣಿಸಿ, ಇಡೀ ಶಿಕ್ಷಣ ಕ್ಷೇತ್ರವನ್ನು ವ್ಯಾಪಾರೀಕರಣ ಮತ್ತು ಖಾಸಗೀಕರಣದ ಸುಳಿಗೆ ತಳ್ಳಲಾಗುತ್ತಿದೆ. ದುಬಾರಿ ಶುಲ್ಕಗಳಿಂದಾಗಿ ಬಡ ಮತ್ತು ಗ್ರಾಮೀಣ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಮರೀಚಿಕೆಯಾಗುತ್ತಿದೆ. ಭಗತ್ ಸಿಂಗ್ ಅವರ ಸಮಾಜವಾದಿ ಕನಸಿನಂತೆ ಪ್ರತಿಯೊಬ್ಬ ನಾಗರಿಕನಿಗೂ ಗುಣಮಟ್ಟದ, ಸಮಾನ ಮತ್ತು ಉಚಿತ ಶಿಕ್ಷಣ ನೀಡುವುದು ಸರ್ಕಾರದ ಪ್ರಥಮ ಕರ್ತವ್ಯವಾಗಬೇಕು. ಇಂದಿನ ಶಿಕ್ಷಣ ವ್ಯಾಪಾರೀಕರಣ, ನಿರುದ್ಯೋಗ ಮತ್ತು ಯುವಜನರ ಬದುಕಿನ ಸಮಸ್ಯೆಗಳ ವಿರುದ್ಧ ನ್ಯಾಯಯುತ ಹೋರಾಟ ರೂಪಿಸಲು ಭಗತ್ ಸಿಂಗ್ ಅವರ ವಿಚಾರಧಾರೆ ಮತ್ತು ಆದರ್ಶಗಳೇ ನಮಗೆ ನಿಜವಾದ ಸ್ಫೂರ್ತಿ" ಎಂದು ಕರೆ ನೀಡಿದರು.

ಕಾರ್ಯಕ್ರಮದ ಆರಂಭದಲ್ಲಿ ಕ್ರಾಂತಿಕಾರಿ ಭಗತ್ ಸಿಂಗ್ ಅವರ ಭಾವಚಿತ್ರಕ್ಕೆ ಗೌರವ ನಮನ ಸಲ್ಲಿಸಿ, ಅವರ ಆದರ್ಶಗಳನ್ನು ಎತ್ತಿಹಿಡಿಯುವ "ಇಂಕ್ವಿಲಾಬ್ ಜಿಂದಾಬಾದ್", "ಭಗತ್ ಸಿಂಗ್ ವಿಚಾರಧಾರೆ ಚಿರಾಯುವಾಗಲಿ" ಎಂಬ ಘೋಷಣೆಗಳನ್ನು ಮೊಳಗಿಸಲಾಯಿತು. ಈ ಸಂದರ್ಭದಲ್ಲಿ ೦ಖಆಖಔ ಜಿಲ್ಲಾ ಕಾರ್ಯದರ್ಶಿಗಳಾದ ಯು ಉಮಾದೇವಿ ಉಪಸ್ಥಿತರಿದ್ದರು, ಜಿಲ್ಲಾ ಸಮಿತಿಯ ಸದಸ್ಯರಾದ ಎಸ್ ಆಕಾಶ್, ಕೆ ಚಂದ್ರ ಮತ್ತು ನೂರಾರು ವಿದ್ಯಾರ್ಥಿಗಳು, ಕ್ರೀಡಾಪಟುಗಳು ಹಾಗೂ ಯುವಜನರು ಪಾಲ್ಗೊಂಡಿದ್ದರು.

**ಯು ಉಮಾದೇವಿ ಜಿಲ್ಲಾ ಕಾರ್ಯದರ್ಶಿಗಳು ಎಐಡಿಎಸ್‌ಓ ವಿಜಯನಗರ**

E NAMMA DHURTHI NEWS
KANNADA DAILY NEWS PAPER

ಈ ನಮ್ಮ ಧೃತಿ ನ್ಯೂಸ್

ಗುರುವಾರ 01–10–2026



# ನೀರು ಜೀವದ ಮೂಲ, ಆರೋಗ್ಯದ ಅಮೂಲ್ಯ ಸಂಪತ್ತು

ನೀರು ಎಂದರೆ ಕೇವಲ ದಾಹ ನೀಗಿಸುವ ದ್ರವವಲ್ಲ. ಅದು ಜೀವದ ಮೂಲ, ಪ್ರಕೃತಿಯ ಅಮೂಲ್ಯ ಕೊಡುಗೆ ಹಾಗೂ ಮನುಷ್ಯನ ಆರೋಗ್ಯಕರ ಜೀವನದ ಪ್ರಮುಖ ಆಧಾರ. ಭೂಮಿಯ ಮೇಲಿರುವ ಪ್ರತಿಯೊಂದು ಜೀವಿಗೂ ನೀರು ಅತ್ಯಗತ್ಯ. ಮನುಷ್ಯ, ಪ್ರಾಣಿ, ಪಕ್ಷಿ, ಸಸ್ಯ, ಕೃಷಿ, ಕೈಗಾರಿಕೆ ಹಾಗೂ ಪರಿಸರ ವ್ಯವಸ್ಥೆ?– ಎಲ್ಲವೂ ನೀರಿನ ಮೇಲೆ ಅವಲಂಬಿತವಾಗಿವೆ. ನೀರಿಲ್ಲದೆ ಜೀವನವನ್ನು ಊಹಿಸಿಕೊಳ್ಳುವುದೇ ಅಸಾಧ್ಯ.

ಮನುಷ್ಯನ ದೇಹದಲ್ಲಿಯೂ ನೀರಿಗೆ ಬಹುಮುಖ್ಯ ಸ್ಥಾನವಿದೆ. ದೇಹದ ಅನೇಕ ಭಾಗಗಳು ಮತ್ತು ದೈಹಿಕ ಕ್ರಿಯೆಗಳು ಸರಿಯಾಗಿ ಕಾರ್ಯನಿರ್ವಹಿಸಲು ನೀರು ಅಗತ್ಯ. ದೇಹದ ಉಷ್ಣಾಂಶವನ್ನು ನಿಯಂತ್ರಿಸುವುದು, ರಕ್ತಸಂಚಾರಕ್ಕೆ ನೆರವಾಗುವುದು, ಜೀರ್ಣಕ್ರಿಯೆಯನ್ನು ಸುಗಮಗೊಳಿಸುವುದು, ಪೋಷಕಾಂಶಗಳನ್ನು ದೇಹದ ವಿವಿಧ ಭಾಗಗಳಿಗೆ ಸಾಗಿಸುವುದು ಮತ್ತು ತ್ಯಾಜ್ಯ ವಸ್ತುಗಳನ್ನು ಹೊರಹಾಕಲು ಸಹಕರಿಸುವುದು ಸೇರಿದಂತೆ ಹಲವು ಕಾರ್ಯಗಳಲ್ಲಿ ನೀರು ಪ್ರಮುಖ ಪಾತ್ರ ವಹಿಸುತ್ತದೆ.

**ದಿನಕ್ಕೆ ಎಷ್ಟು ನೀರು ಕುಡಿಯಬೇಕು**

ದಿನಕ್ಕೆ ಎಲ್ಲರೂ ಒಂದೇ ಪ್ರಮಾಣದ ನೀರು ಕುಡಿಯಬೇಕು ಎಂಬ ನಿಯಮವಿಲ್ಲ. ವ್ಯಕ್ತಿಯ ವಯಸ್ಸು, ದೇಹದ ಗಾತ್ರ, ದೈಹಿಕ ಚಟುವಟಿಕೆ, ಹವಾಮಾನ, ಆಹಾರ ಪದ್ಧತಿ ಮತ್ತು ಆರೋಗ್ಯದ ಸ್ಥಿತಿಯನ್ನು ಅವಲಂಬಿಸಿ ನೀರಿನ ಅಗತ್ಯ ಬದಲಾಗುತ್ತದೆ. ಸಾಮಾನ್ಯವಾಗಿ ಆರೋಗ್ಯವಂತ ವ್ಯಕ್ತಿಯು ತನ್ನ ದಾಹವನ್ನು ಗಮನಿಸಿಕೊಂಡು ದಿನವಿಡೀ ನಿಯಮಿತವಾಗಿ ನೀರು ಸೇವಿಸುವುದು ಉತ್ತಮ. ಬಿಸಿಲು ಹೆಚ್ಚಿರುವ ದಿನಗಳಲ್ಲಿ, ಹೆಚ್ಚು ಸಮಯ ಹೊರಗಡೆ ಕೆಲಸ ಮಾಡುವಾಗ, ವ್ಯಾಯಾಮ ಮಾಡುವಾಗ ಅಥವಾ ಹೆಚ್ಚು ಬೆವರುವ ಸಂದರ್ಭದಲ್ಲಿ ದೇಹಕ್ಕೆ ಸಾಮಾನ್ಯಕ್ಕಿಂತ ಹೆಚ್ಚಿನ ದ್ರವದ ಅಗತ್ಯ ಉಂಟಾಗಬಹುದು. ನೀರನ್ನು ಒಂದೇ ಬಾರಿಗೆ ದೊಡ್ಡ ಪ್ರಮಾಣದಲ್ಲಿ ಕುಡಿಯುವುದಕ್ಕಿಂತ ದಿನವಿಡೀ ಸ್ವಲ್ಪಸ್ವಲ್ಪವಾಗಿ ಕುಡಿಯುವ ಅಭ್ಯಾಸ ಹೆಚ್ಚು ಅನುಕೂಲಕರವಾಗಿದೆ. ದಾಹ, ಮೂತ್ರದ ಪ್ರಮಾಣ ಮತ್ತು ಬಣ್ಣ, ದೈಹಿಕ ಚಟುವಟಿಕೆ ಹಾಗೂ ಹವಾಮಾನವನ್ನು ಗಮನಿಸಿ ದ್ರವ ಸೇವನೆಯನ್ನು ಹೊಂದಿಸಿಕೊಳ್ಳಬಹುದು.

**ಬೆಳಿಗ್ಗೆ ನೀರು ಕುಡಿಯುವ ಅಭ್ಯಾಸ**

ಬೆಳಿಗ್ಗೆ ಎದ್ದ ನಂತರ ನೀರು ಕುಡಿಯುವುದು ಅನೇಕ ಜನರ ದಿನನಿತ್ಯದ ಉತ್ತಮ ಅಭ್ಯಾಸವಾಗಿದೆ. ರಾತ್ರಿ ನಿದ್ರೆಯ ಸಮಯದಲ್ಲಿ ದೇಹಕ್ಕೆ ಯಾವುದೇ ದ್ರವ ಸಿಗುವುದಿಲ್ಲ. ಬೆಳಿಗ್ಗೆ ಎದ್ದಾಗ ದಾಹವಾಗಿದ್ದರೆ ನೀರು ಕುಡಿಯಬಹುದು. ಆದರೆ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ನಿರ್ದಿಷ್ಟ ಪ್ರಮಾಣದ ನೀರನ್ನು ಕುಡಿಯಲೇಬೇಕು, ಅದರಿಂದ ಎಲ್ಲಾ ರೋಗಗಳು ದೂರವಾಗುತ್ತವೆ ಎಂಬುದಕ್ಕೆ ಸಾಮಾನ್ಯವಾಗಿ ಸಾಕಷ್ಟು ವೈಜ್ಞಾನಿಕ ಆಧಾರವಿಲ್ಲ. ಮುಖ್ಯವಾದದ್ದು ದಿನವಿಡೀ ದೇಹಕ್ಕೆ ಅಗತ್ಯವಿರುವಷ್ಟು ದ್ರವ ದೊರೆಯುವಂತೆ ನೋಡಿಕೊಳ್ಳುವುದು.

**ದೇಹದಲ್ಲಿ ನೀರಿನ ಕೊರತೆಯಾದರೆ ಏನಾಗುತ್ತದೆ**

ದೇಹದಿಂದ ನೀರು ಕಡಿಮೆಯಾದಾಗ ಅದನ್ನು ನಿರ್ಜಲೀಕರಣ ಎಂದು ಕರೆಯಲಾಗುತ್ತದೆ. ಹೆಚ್ಚು ಬೆವರುವುದು, ವಾಂತಿ, ಅತಿಸಾರ, ಜ್ವರ ಅಥವಾ ಸಾಕಷ್ಟು ದ್ರವ ಸೇವಿಸದಿರುವುದು ಮುಂತಾದ



ಕಾರಣಗಳಿಂದ ದೇಹದಲ್ಲಿ ನೀರಿನ ಕೊರತೆ ಉಂಟಾಗಬಹುದು. ನೀರಿನ ಕೊರತೆಯ ಆರಂಭಿಕ ಲಕ್ಷಣಗಳಲ್ಲಿ ದಾಹ, ಬಾಯಿ ಒಣಗುವುದು, ದೌರ್ಬಲ್ಯ, ತಲೆನೋವು, ತಲೆಸುತ್ತುವಿಕೆ ಹಾಗೂ ಮೂತ್ರದ ಪ್ರಮಾಣ ಕಡಿಮೆಯಾಗುವುದು ಕಾಣಿಸಿಕೊಳ್ಳಬಹುದು. ಮೂತ್ರದ ಬಣ್ಣ ಸಾಮಾನ್ಯಕ್ಕಿಂತ ಗಾಢವಾಗಿರುವುದೂ ದೇಹದಲ್ಲಿ ದ್ರವದ ಕೊರತೆಯ ಸೂಚನೆಯಾಗಿರಬಹುದು. ತೀವ್ರವಾದ ನಿರ್ಜಲೀಕರಣ ಅಪಾಯಕಾರಿ. ಹೆಚ್ಚು ದೌರ್ಬಲ್ಯ, ಗೊಂದಲ, ಮೂರ್ಛೆ ಅಥವಾ ದ್ರವವನ್ನು ಉಳಿಸಿಕೊಳ್ಳಲಾಗದಂತಹ ಪರಿಸ್ಥಿತಿ ಕಂಡುಬಂದರೆ ವೈದ್ಯಕೀಯ ನೆರವು ಪಡೆಯುವುದು ಅಗತ್ಯ.

**ಬಿಸಿಲಿನ ಸಮಯದಲ್ಲಿ ನೀರಿನ ಮಹತ್ವ**

ಬೇಸಿಗೆಯಲ್ಲಿ ದೇಹದಿಂದ ಬೆವರಿನ ಮೂಲಕ ಹೆಚ್ಚಿನ ಪ್ರಮಾಣದ ದ್ರವ ಹೊರಹೋಗುತ್ತದೆ. ಹೊಲದಲ್ಲಿ ಕೆಲಸ ಮಾಡುವ ರೈತರು, ಕಟ್ಟಡ ನಿರ್ಮಾಣ ಕಾರ್ಮಿಕರು, ರಸ್ತೆ ಕೆಲಸಗಾರರು, ಕ್ರೀಡಾಪಟುಗಳು ಹಾಗೂ ಬಿಸಿಲಿನಲ್ಲಿ ಹೆಚ್ಚು ಸಮಯ ಕಳೆಯುವವರು ದ್ರವದ ಕೊರತೆಯ ಅಪಾಯಕ್ಕೆ ಒಳಗಾಗಬಹುದು ಇಂತಹ ಸಂದರ್ಭಗಳಲ್ಲಿ ದಾಹ ಬರುವವರೆಗೆ ಕಾಯದೆ ನಿಯಮಿತವಾಗಿ ದ್ರವ ಸೇವಿಸುವುದು ಸಹಾಯಕ. ತೀವ್ರವಾಗಿ ಬೆವರುವ ಸಂದರ್ಭಗಳಲ್ಲಿ ಕೇವಲ ನೀರಷ್ಟೇ ಸಾಕೇ ಅಥವಾ ಇತರ ದ್ರವ ಮತ್ತು ವಿದ್ಯುದ್ವಿಚ್ಛೇದ್ಯಗಳ ಅಗತ್ಯವಿದೆಯೇ ಎಂಬುದು ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ.

**ವ್ಯಾಯಾಮ ಮಾಡುವಾಗ ನೀರು**

ನಡೆಯುವುದು, ಓಡುವುದು, ವ್ಯಾಯಾಮ ಮಾಡುವುದು ಅಥವಾ ಕ್ರೀಡೆಗಳಲ್ಲಿ ಭಾಗವಹಿಸುವಾಗ ದೇಹದಿಂದ ಬೆವರು ಹೊರಹೋಗುತ್ತದೆ. ಆದ್ದರಿಂದ ದೈಹಿಕ ಚಟುವಟಿಕೆಯ ಮೊದಲು, ಸಂದರ್ಭದಲ್ಲಿ ಮತ್ತು ನಂತರ ದೇಹದ ದ್ರವದ ಅಗತ್ಯವನ್ನು ಗಮನಿಸುವುದು ಮುಖ್ಯ. ಸಾಮಾನ್ಯ ಮತ್ತು ಕಡಿಮೆ ಅವಧಿಯ ವ್ಯಾಯಾಮಕ್ಕೆ ನೀರು ಸಾಕಾಗಬಹುದು. ದೀರ್ಘಕಾಲದ ಅಥವಾ ತೀವ್ರವಾದ ವ್ಯಾಯಾಮದಲ್ಲಿ ಹೆಚ್ಚು ಬೆವರು ಬಂದರೆ ದ್ರವದ ಜೊತೆಗೆ ವಿದ್ಯುದ್ವಿಚ್ಛೇದ್ಯಗಳ ಅಗತ್ಯವೂ ಉಂಟಾಗಬಹುದು. ಇಂತಹ ಸಂದರ್ಭಗಳಲ್ಲಿ ಪರಿಸ್ಥಿತಿಗೆ ಅನುಗುಣವಾಗಿ ಸೂಕ್ತ ಪಾನೀಯವನ್ನು ಆಯ್ಕೆ ಮಾಡಬೇಕು.

**ನೀರನ್ನು ಒಂದೇ ಬಾರಿ ಹೆಚ್ಚು ಕುಡಿಯುವುದು ಸರಿಯೇ**

ದೇಹಕ್ಕೆ ನೀರು ಅಗತ್ಯವಾದರೂ ಅತಿಯಾದ ಪ್ರಮಾಣದಲ್ಲಿ ನೀರನ್ನು ಅತಿ ವೇಗವಾಗಿ ಕುಡಿಯುವುದು ಕೂಡ ಸೂಕ್ತವಲ್ಲ. ಅತಿಯಾದ ನೀರಿನ ಸೇವನೆಯಿಂದ ರಕ್ತದಲ್ಲಿನ ಸೋಡಿಯಂ ಪ್ರಮಾಣ ಅಸಹಜವಾಗಿ ಕಡಿಮೆಯಾಗುವ ಅಪಾಯವಿದೆ. ಈ ಸ್ಥಿತಿಯನ್ನು ಹೈಪೋನಾಟ್ರೇಮಿಯಾ ಎಂದು ಕರೆಯಲಾಗುತ್ತದೆ. ಆದ್ದರಿಂದ "ಎಷ್ಟು ಹೆಚ್ಚು ನೀರು ಕುಡಿದರೂ ಆರೋಗ್ಯಕ್ಕೆ ಒಳ್ಳೆಯದು" ಎಂಬ ಕಲ್ಪನೆ ಸರಿಯಲ್ಲ. ದೇಹದ ಅಗತ್ಯಕ್ಕೆ ಅನುಗುಣವಾಗಿ, ದಿನವಿಡೀ ಸಮತೋಲನದಿಂದ ನೀರು ಸೇವಿಸುವುದು ಉತ್ತಮ.

**ಆಹಾರದಿಂದಲೂ ದೇಹಕ್ಕೆ ನೀರು ದೊರೆಯುತ್ತದೆ**

ನಾವು ಕುಡಿಯುವ ನೀರಿನ ಜೊತೆಗೆ ಆಹಾರದ ಮೂಲಕವೂ ದೇಹಕ್ಕೆ ಸಾಕಷ್ಟು ದ್ರವ ದೊರೆಯುತ್ತದೆ. ಹಣ್ಣುಗಳು ಮತ್ತು ತರಕಾರಿಗಳಲ್ಲಿ ನೀರಿನ ಅಂಶ ಹೆಚ್ಚಿರುತ್ತದೆ. ಕಲ್ಲಂಗಡಿ, ಕಿತ್ತಳೆ, ಸೌತೆಕಾಯಿ, ಟೊಮ್ಯಾಟೊ ಮುಂತಾದ ಆಹಾರಗಳಲ್ಲಿ ನೀರಿನ ಪ್ರಮಾಣ ಗಮನಾರ್ಹವಾಗಿದೆ. ಸೂಪ್, ಮಜ್ಜಿಗೆ ಹಾಗೂ ಇತರ ದ್ರವಾಂಶಯುಕ್ತ ಆಹಾರಗಳೂ ಒಟ್ಟು ದ್ರವ ಸೇವನೆಗೆ ಕೊಡುಗೆ ನೀಡುತ್ತವೆ. ಹೀಗಾಗಿ ದೇಹದ ದ್ರವ ಅಗತ್ಯವನ್ನು ಅರ್ಥಮಾಡಿಕೊಳ್ಳುವಾಗ ಕೇವಲ ಗ್ಲಾಸ್‌ಗಳಲ್ಲಿ ಕುಡಿದ ನೀರನ್ನಷ್ಟೇ ಪರಿಗಣಿಸಬಾರದು.

**ಶುದ್ಧ ನೀರು ಕುಡಿಯುವುದು ಅತ್ಯಗತ್ಯ**

ನೀರು ಕುಡಿಯುವುದಕ್ಕಿಂತಲೂ ಮುಖ್ಯವಾದದ್ದು ಸುರಕ್ಷಿತ ಹಾಗೂ ಶುದ್ಧ ನೀರನ್ನು ಕುಡಿಯುವುದು. ಕಲುಷಿತ ನೀರಿನಿಂದ ವಿವಿಧ ಸೋಂಕುಗಳು ಮತ್ತು ಜಲಜನ್ಯ ಕಾಯಿಲೆಗಳು ಉಂಟಾಗುವ ಸಾಧ್ಯತೆ ಇದೆ. ಕುಡಿಯುವ ನೀರಿನ ಮೂಲವನ್ನು ಸ್ವಚ್ಛವಾಗಿಡಬೇಕು. ನೀರನ್ನು ಸಂಗ್ರಹಿಸುವ ಪಾತ್ರೆಗಳನ್ನು ನಿಯಮಿತವಾಗಿ ಸ್ವಚ್ಛಗೊಳಿಸಬೇಕು. ಮನೆಯಲ್ಲಿನ ಕುಡಿಯುವ ನೀರಿನ ಸಂಗ್ರಹಣಾ ಪಾತ್ರೆಗೆ ಕೈ ಹಾಕುವುದು, ಮುಚ್ಚಳವಿಲ್ಲದೆ ಇಡುವುದು ಅಥವಾ ಸ್ವಚ್ಛವಲ್ಲದ ಪಾತ್ರೆ ಬಳಸುವುದನ್ನು ತಪ್ಪಿಸಬೇಕು. ನೀರಿನ ಗುಣಮಟ್ಟದ ಬಗ್ಗೆ ಅನುಮಾನವಿದ್ದರೆ ಸೂಕ್ತ ಶುದ್ಧೀಕರಣ ವಿಧಾನವನ್ನು ಬಳಸುವುದು ಅಗತ್ಯ. ಸ್ಥಳೀಯ ನೀರಿನ ಮೂಲದ ಗುಣಮಟ್ಟ ಮತ್ತು ಲಭ್ಯವಿರುವ ಸೌಲಭ್ಯಕ್ಕೆ ಅನುಗುಣವಾಗಿ ನೀರನ್ನು ಶುದ್ಧೀಕರಿಸುವ ವಿಧಾನವನ್ನು ಆಯ್ಕೆ ಮಾಡಬೇಕು.

**ಮಕ್ಕಳಿಗೆ ನೀರಿನ ಮಹತ್ವ**

ಮಕ್ಕಳ ದೇಹದ ಬೆಳವಣಿಗೆ ಮತ್ತು ದೈನಂದಿನ ಚಟುವಟಿಕೆಗಳಿಗೆ ಸಾಕಷ್ಟು ದ್ರವ ದೊರೆಯುವುದು ಮುಖ್ಯ. ಆಟವಾಡುವಾಗ ಅಥವಾ ಬಿಸಿಲಿನಲ್ಲಿ ಹೆಚ್ಚು ಸಮಯ ಕಳೆಯುವಾಗ ಮಕ್ಕಳಿಗೆ ದ್ರವದ ಅಗತ್ಯ ಹೆಚ್ಚಾಗಬಹುದು. ಮಕ್ಕಳಿಗೆ ದಾಹವಾದಾಗ ನೀರು ಕುಡಿಯುವ ಅಭ್ಯಾಸ ಬೆಳೆಸಬೇಕು. ಸಕ್ಕರೆ ಹೆಚ್ಚಿರುವ ತಂಪುಪಾನೀಯಗಳ ಬದಲಿಗೆ ಸಾಮಾನ್ಯ ನೀರು ಮತ್ತು ಪೌಷ್ಟಿಕ ದ್ರವಗಳಿಗೆ ಆದ್ಯತೆ ನೀಡುವುದು ಉತ್ತಮ. ವಯೋವೃದ್ಧರಲ್ಲೂ ದ್ರವದ ಬಗ್ಗೆ ಗಮನ ಅಗತ್ಯ

**ವಯಸ್ಸಾದವರಲ್ಲಿ ದಾಹದ ಅನುಭವ ಕೆಲವು**

ಸಂದರ್ಭಗಳಲ್ಲಿ ಕಡಿಮೆಯಾಗಬಹುದು. ಹೀಗಾಗಿ ದಾಹವಾಗದಿದ್ದರೂ ನಿಯಮಿತವಾಗಿ ದ್ರವ ಸೇವಿಸುವ ಅಗತ್ಯವಿರಬಹುದು. ಆದರೆ ಹೃದಯ, ಮೂತ್ರಪಿಂಡ ಅಥವಾ ಇತರ ಆರೋಗ್ಯ ಸಮಸ್ಯೆಗಳ ಕಾರಣದಿಂದ ವೈದ್ಯರು ದ್ರವ ಸೇವನೆಗೆ ಮಿತಿ ಸೂಚಿಸಿದ್ದರೆ ಆ ವೈದ್ಯಕೀಯ ಸಲಹೆಯನ್ನು ಪಾಲಿಸಬೇಕು.

**ಚಹಾ, ಕಾಫಿ ಮತ್ತು ಇತರ ಪಾನೀಯಗಳ ಸ್ಥಾನ**

ಚಹಾ ಮತ್ತು ಕಾಫಿಯಂತಹ ಪಾನೀಯಗಳಲ್ಲಿಯೂ ನೀರಿನ ಅಂಶವಿದೆ. ಆದರೆ ದೇಹಕ್ಕೆ ದ್ರವ ಒದಗಿಸುವ ಮುಖ್ಯ ಮೂಲವಾಗಿ ಸಾದಾ ನೀರನ್ನು ಬಳಸುವುದು ಉತ್ತಮ. ಸಕ್ಕರೆ ಹೆಚ್ಚಿರುವ ತಂಪುಪಾನೀಯಗಳನ್ನು ಅತಿಯಾಗಿ ಸೇವಿಸುವುದರಿಂದ ಹೆಚ್ಚುವರಿ ಸಕ್ಕರೆ ದೇಹಕ್ಕೆ ಸೇರುವ ಸಾಧ್ಯತೆ ಇರುವುದರಿಂದ ಅವುಗಳನ್ನು ಮಿತಿಗೊಳಿಸುವುದು ಆರೋಗ್ಯಕರ ಅಭ್ಯಾಸ.

**ನೀರು ಮತ್ತು ಜೀರ್ಣಕ್ರಿಯೆ**

ದೇಹದ ಸಾಮಾನ್ಯ ಜೀರ್ಣಕ್ರಿಯೆಯಲ್ಲಿ ನೀರು ಪ್ರಮುಖ ಪಾತ್ರ ವಹಿಸುತ್ತದೆ. ಸಾಕಷ್ಟು ದ್ರವ ಸೇವನೆ, ನಾರಿನಂಶ ಇರುವ ಆಹಾರ ಹಾಗೂ ನಿಯಮಿತ ದೈಹಿಕ ಚಟುವಟಿಕೆ ಒಟ್ಟಾಗಿ ಉತ್ತಮ ಜೀರ್ಣಕ್ರಿಯೆಗೆ ಸಹಕಾರಿಯಾಗಬಹುದು. ಮಲಬದ್ಧತೆ ಇರುವವರು ಸಾಕಷ್ಟು ದ್ರವ ಸೇವನೆ, ಹಣ್ಣು–ತರಕಾರಿಗಳ ಸೇವನೆ ಮತ್ತು ದೈಹಿಕ ಚಟುವಟಿಕೆಯ ಬಗ್ಗೆ ಗಮನ ಹರಿಸಬಹುದು. ನಿರಂತರ ಸಮಸ್ಯೆ ಇದ್ದರೆ ವೈದ್ಯರನ್ನು ಸಂಪರ್ಕಿಸುವುದು ಸೂಕ್ತ.

**ಮೂತ್ರಪಿಂಡಗಳ ಕಾರ್ಯದಲ್ಲಿ ನೀರಿನ ಪಾತ್ರ**

ಮೂತ್ರಪಿಂಡಗಳು ದೇಹದಲ್ಲಿನ ತ್ಯಾಜ್ಯ ವಸ್ತುಗಳನ್ನು ಮೂತ್ರದ ಮೂಲಕ ಹೊರಹಾಕುವ ಪ್ರಮುಖ ಅಂಗಗಳು. ದೇಹದ ದ್ರವ ಸಮತೋಲನವನ್ನು ಕಾಪಾಡುವಲ್ಲಿಯೂ ಅವು ಪ್ರಮುಖ ಪಾತ್ರವಹಿಸುತ್ತವೆ. ಸಾಮಾನ್ಯವಾಗಿ ದೇಹಕ್ಕೆ ಅಗತ್ಯವಿರುವಷ್ಟು ದ್ರವ ದೊರೆಯುವುದು ಮೂತ್ರಪಿಂಡಗಳ ಸಾಮಾನ್ಯ ಕಾರ್ಯಕ್ಕೆ ಸಹಾಯಕ. ಆದರೆ ಮೂತ್ರಪಿಂಡದ ಕಾಯಿಲೆ ಅಥವಾ ಇತರ ಆರೋಗ್ಯ ಸಮಸ್ಯೆ ಇರುವವರು ತಮ್ಮ ವೈದ್ಯರ ಸಲಹೆಯಂತೆ ದ್ರವ ಸೇವಿಸಬೇಕು.

**ನೀರನ್ನು ಉಳಿಸುವುದು ನಮ್ಮ ಕರ್ತವ್ಯ**

ನೀರು ನಮ್ಮ ಆರೋಗ್ಯಕ್ಕೆ ಮಾತ್ರವಲ್ಲ, ಮುಂದಿನ ಪೀಳಿಗೆಯ ಬದುಕಿಗೂ ಅಗತ್ಯ. ಮಳೆನೀರಿನ ಸಂರಕ್ಷಣೆ, ಕೆರೆ–ಕಟ್ಟೆಗಳ ರಕ್ಷಣೆ, ಭೂಗರ್ಭಜಲದ ಮಿತ ಬಳಕೆ ಮತ್ತು ನೀರಿನ ವ್ಯರ್ಥತೆಯನ್ನು ತಡೆಯುವುದು ಪ್ರತಿಯೊಬ್ಬರ ಜವಾಬ್ದಾರಿ. ಹಲ್ಲುಜ್ಜುವಾಗ ಅಥವಾ ಕೈ ತೊಳೆಯುವಾಗ ಅಗತ್ಯವಿಲ್ಲದೆ ನಲ್ಲಿ ತೆರೆದಿಡಬಾರದು. ಮನೆಗಳಲ್ಲಿ ನೀರಿನ ಸೋರಿಕೆ ಕಂಡುಬಂದರೆ ತಕ್ಷಣ ಸರಿಪಡಿಸಬೇಕು. ವಾಹನ ತೊಳೆಯುವುದು, ಮನೆ ಸ್ವಚ್ಛಗೊಳಿಸುವುದು ಮತ್ತು ತೋಟಕ್ಕೆ ನೀರು ಹಾಕುವ ಸಂದರ್ಭದಲ್ಲಿ ಸಾಧ್ಯವಾದಷ್ಟು ನೀರನ್ನು ಮಿತವಾಗಿ ಬಳಸಬೇಕು. ಕೃಷಿಯಲ್ಲಿ ಹನಿ ನೀರಾವರಿ, ತುಂತುರು ನೀರಾವರಿ ಮತ್ತು ಮಳೆನೀರು ಸಂಗ್ರಹಣೆಯಂತಹ ವಿಧಾನಗಳನ್ನು ಬಳಸುವುದರಿಂದ ನೀರಿನ ಬಳಕೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಬಹುದು.

**ಮಳೆನೀರು ಸಂರಕ್ಷಣೆ**

ಮಳೆನೀರು ಪ್ರಕೃತಿಯ ಅಮೂಲ್ಯ ಸಂಪತ್ತು. ಮಳೆ ಬಂದಾಗ ಹೆಚ್ಚಿನ ಪ್ರಮಾಣದ ನೀರು ಹರಿದು ಹೋಗುವುದನ್ನು ತಡೆಯಲು ಮನೆಗಳು, ಶಾಲೆಗಳು, ಕಚೇರಿಗಳು ಹಾಗೂ ಸಾರ್ವಜನಿಕ ಕಟ್ಟಡಗಳಲ್ಲಿ ಮಳೆನೀರು ಸಂಗ್ರಹಣಾ ವ್ಯವಸ್ಥೆಗಳನ್ನು ಅಳವಡಿಸಬಹುದು.

ಮಳೆನೀರನ್ನು ಭೂಮಿಗೆ ಇಂಗಿಸುವ ವ್ಯವಸ್ಥೆ ಮಾಡಿದರೆ ಭೂಗರ್ಭಜಲದ ಮಟ್ಟವನ್ನು ಕಾಪಾಡಿಕೊಳ್ಳಲು ಸಹಕಾರಿಯಾಗಬಹುದು. ಕೆರೆಗಳು, ಹಳ್ಳಗಳು ಮತ್ತು ಸಾಂಪ್ರದಾಯಿಕ ಜಲಮೂಲಗಳನ್ನು ಸಂರಕ್ಷಿಸುವುದೂ ನೀರಿನ ಭದ್ರತೆಗೆ ಅತ್ಯಂತ ಮುಖ್ಯ.

**ನೀರು ಆರೋಗ್ಯವೂ ಹೌದು, ಹೊಣೆಗಾರಿಕೆಯೂ ಹೌದು**

ನೀರಿನ ಮಹತ್ವವನ್ನು ಅರಿತುಕೊಳ್ಳುವುದು ಎಂದರೆ ಕೇವಲ ಹೆಚ್ಚು ನೀರು ಕುಡಿಯುವುದು ಎಂದಲ್ಲ. ದೇಹಕ್ಕೆ ಅಗತ್ಯವಿರುವಷ್ಟು ಶುದ್ಧ ನೀರನ್ನು ಸೇವಿಸುವುದು, ದೇಹದ ದ್ರವದ ಅಗತ್ಯವನ್ನು ಗಮನಿಸುವುದು, ಅತಿಯಾದ ನೀರಿನ ಸೇವನೆಯನ್ನು ತಪ್ಪಿಸುವುದು ಮತ್ತು ಆರೋಗ್ಯದ ವಿಶೇಷ ಪರಿಸ್ಥಿತಿಯಲ್ಲಿ ವೈದ್ಯರ ಸಲಹೆಯನ್ನು ಪಾಲಿಸುವುದು ಮುಖ್ಯ.

ಅದೇ ರೀತಿ ಪ್ರತಿಯೊಂದು ಹನಿ ನೀರನ್ನೂ ಅಮೂಲ್ಯವೆಂದು ಪರಿಗಣಿಸಿ ವ್ಯರ್ಥವಾಗದಂತೆ ನೋಡಿಕೊಳ್ಳಬೇಕು. ಇಂದು ನಾವು ಉಳಿಸುವ ನೀರು ನಾಳೆಯ ಜೀವನಕ್ಕೆ ಆಧಾರವಾಗಬಹುದು. ನೀರು ಇದ್ದರೆ ಜೀವ ಇದೆ.ನೀರು ಉಳಿಸಿದರೆ ಭವಿಷ್ಯ ಉಳಿಯುತ್ತದೆ. ಆರೋಗ್ಯಕ್ಕಾಗಿ ನೀರನ್ನು ಸರಿಯಾಗಿ ಸೇವಿಸೋಣ; ಮುಂದಿನ ಪೀಳಿಗೆಗಾಗಿ ನೀರನ್ನು ಜವಾಬ್ದಾರಿಯಿಂದ ಸಂರಕ್ಷಿಸೋಣ.

ವಿನಾಯಕ ಬಿ. ತಿಪ್ಪಣ್ಣನವರ

# ವಿರೋಧಿಸುವ ಭರದಲ್ಲಿ ತುಚ್ಛವಾಗಿ ಬಯ್ಯುವುದು ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ

ಪ್ರಜಾಪ್ರಭುತ್ವದ ಸೌಂದರ್ಯವೇ ಭಿನ್ನಾಭಿಪ್ರಾಯ. ಒಬ್ಬರ ಅಭಿಪ್ರಾಯವನ್ನು ಮತ್ತೊಬ್ಬರು ಒಪ್ಪಲೇಬೇಕು ಎಂಬ ನಿಯಮ ಪ್ರಜಾಪ್ರಭುತ್ವದಲ್ಲಿಲ್ಲ. ಬದಲಾಗಿ, ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸುವ ಹಕ್ಕು, ಪ್ರಶ್ನಿಸುವ ಸ್ವಾತಂತ್ರ್ಯ ಮತ್ತು ಅನ್ಯಾಯದ ವಿರುದ್ಧ ಧ್ವನಿ ಎತ್ತುವ ಅವಕಾಶವೇ ಪ್ರಜಾಪ್ರಭುತ್ವದ ಜೀವಾಳ. ಆದರೆ ವಿರೋಧಿಸುವ ಹಕ್ಕಿನೊಂದಿಗೆ ಜವಾಬ್ದಾರಿಯೂ ಬರುತ್ತದೆ. ನಮ್ಮ ಮಾತುಗಳು ಎಷ್ಟೇ ಕಠಿಣವಾಗಿದ್ದರೂ ಅವು ಘನತೆ, ಗೌರವ ಮತ್ತು ಸಾಮಾಜಿಕ ಸೌಹಾರ್ದತೆಯ ಗಡಿಯನ್ನು ದಾಟಬಾರದು. ಏಕೆಂದರೆ ನಾವು ಮತ್ತೊಬ್ಬರನ್ನು ಹೇಗೆ ಸಂಬೋಧಿಸುತ್ತೇವೆ ಎಂಬುದೇ ನಮ್ಮ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿರುತ್ತದೆ.

ಇಂದು ರಾಜ್ಯದ ಅನೇಕ ಭಾಗಗಳು ಬರಗಾಲದ ಸಂಕಷ್ಟವನ್ನು ಎದುರಿಸುತ್ತಿವೆ. ಮಳೆ ಕೊರತೆ, ಕೃಷಿ ಚಟುವಟಿಕೆಗಳ ಮೇಲಿನ ಪರಿಣಾಮ, ಜಾನುವಾರುಗಳ ಸಂಕಷ್ಟ, ಕುಡಿಯುವ ನೀರಿನ ಸಮಸ್ಯೆ ಹಾಗೂ ರೈತರ ಆರ್ಥಿಕ ಒತ್ತಡಗಳು ಸಮಾಜದ ಮುಂದೆ ಗಂಭೀರ ಪ್ರಶ್ನೆಗಳನ್ನು ಎತ್ತಿವೆ. ಇಂತಹ ಸಂದರ್ಭದಲ್ಲಿ ರೈತ ಸಂಘಟನೆಗಳು ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ ಹೋರಾಟ ನಡೆಸುವುದು ಸಹಜವೂ ಹೌದು, ಪ್ರಜಾಪ್ರಭುತ್ವದ ಹಕ್ಕು ಕೂಡ ಹೌದು. ರೈತರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವುದು, ಪರಿಹಾರಕ್ಕಾಗಿ ಒತ್ತಾಯಿಸುವುದು ಮತ್ತು ತಮ್ಮ ನೋವನ್ನು ಸಮಾಜದ ಮುಂದೆ ಹೇಳಿಕೊಳ್ಳುವುದು ಅವರ ಹಕ್ಕು. ಆದರೆ ಹೋರಾಟದ ಉದ್ದೇಶ ಎಷ್ಟೇ ನ್ಯಾಯಯುತವಾಗಿದ್ದರೂ, ಅದರ ಭಾಷೆ ಮತ್ತು ಅಭಿವ್ಯಕ್ತಿಯಲ್ಲೂ ಸಂಯಮ ಇರಬೇಕು. ಹೋರಾಟಕ್ಕೆ ಶಕ್ತಿ ನೀಡುವುದು ಕೇವಲ ಘೋಷಣೆಗಳಲ್ಲ; ಅದರ ಹಿಂದೆ ಇರುವ ವಿಚಾರ, ವಾಸ್ತವಾಂಶ ಮತ್ತು ನೈತಿಕ ಬಲ. ಮಾತಿನ ತೀವ್ರತೆ ಹೆಚ್ಚಾದಷ್ಟೂ ಸಮಸ್ಯೆಗೆ ಪರಿಹಾರ ಸಿಗುತ್ತದೆ ಎಂಬುದು ಸತ್ಯವಲ್ಲ. ಕೆಲವೊಮ್ಮೆ ಅತಿರೇಕದ ಭಾಷೆ ಮೂಲ ಸಮಸ್ಯೆಯನ್ನು ಮರೆಮಾಚಿ, ವ್ಯಕ್ತಿಗತ ಟೀಕೆ ಮತ್ತು ಅವಹೇಳನವೇ ಚರ್ಚೆಯ ಕೇಂದ್ರವಾಗುವಂತೆ ಮಾಡುತ್ತದೆ. ರೈತ ನಮ್ಮ ಅನ್ನದಾತ. ಹೊಲದಲ್ಲಿ ಬೆವರು ಸುರಿಸಿ ಇಡೀ ಸಮಾಜದ ಹೊಟ್ಟೆ ತುಂಬಿಸುವ ವ್ಯಕ್ತಿಯೇ ರೈತ. ರೈತ ಸಂಕಷ್ಟಕ್ಕೆ ಸಿಲುಕಿದಾಗ ಅದರ ಪರಿಣಾಮ ಕೇವಲ ಒಂದು ಕುಟುಂಬಕ್ಕೆ ಸೀಮಿತವಾಗುವುದಿಲ್ಲ; ಅದು ಆಹಾರ ಭದ್ರತೆ, ಗ್ರಾಮೀಣ ಆರ್ಥಿಕತೆ ಮತ್ತು ಒಟ್ಟಾರೆ ಸಮಾಜದ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದ ರೈತರ ನೋವನ್ನು ಅರ್ಥಮಾಡಿಕೊಳ್ಳುವುದು ಮತ್ತು ಅವರಿಗೆ ನೈತಿಕ ಆತ್ಮಸ್ಥೈರ್ಯ ತುಂಬುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ.

ಅದೇ ರೀತಿಯಲ್ಲಿ, ಸಮಾಜದಲ್ಲಿ ಆಧ್ಯಾತ್ಮಿಕ ಮತ್ತು ಧಾರ್ಮಿಕ ಮಾರ್ಗದರ್ಶನ ನೀಡುವ ಸ್ವಾಮೀಜಿಗಳು, ಮಠಾಧೀಶರು ಮತ್ತು ಧಾರ್ಮಿಕ ಮುಖಂಡರಿಗೂ ಒಂದು ಸಾಮಾಜಿಕ ಜವಾಬ್ದಾರಿ ಇದೆ. ಅವರ ಮಾತುಗಳನ್ನು ಸಾವಿರಾರು, ಕೆಲವೊಮ್ಮೆ ಲಕ್ಷಾಂತರ ಜನರು ಕೇಳುತ್ತಾರೆ. ಹೀಗಾಗಿ ಅವರ ಮಾತುಗಳಲ್ಲಿ ಜವಾಬ್ದಾರಿ, ಸಂಯಮ ಮತ್ತು ಸಮಾಜವನ್ನು



ಒಗ್ಗೂಡಿಸುವ ಮನೋಭಾವ ಇರಬೇಕಾಗುತ್ತದೆ. ಧಾರ್ಮಿಕ ವೇದಿಕೆಗಳು ಜನರಲ್ಲಿ ವಿಶ್ವಾಸ, ನೈತಿಕತೆ ಮತ್ತು ಮಾನವೀಯತೆಯನ್ನು ಬೆಳೆಸುವ ಸ್ಥಳಗಳಾಗಬೇಕು; ಪರಸ್ಪರ ದ್ವೇಷವನ್ನು ಹೆಚ್ಚಿಸುವ ವೇದಿಕೆಗಳಾಗಬಾರದು. ಬಸವಣ್ಣನವರ ವಿಚಾರಧಾರೆ, ಕಾಯಕ, ದಾಸೋಹ, ಸಮಾನತೆ ಮತ್ತು ಮಾನವ ಘನತೆಯ ಸಂದೇಶಗಳು ಕರ್ನಾಟಕದ ಸಾಮಾಜಿಕ ಚಿಂತನೆಯ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆದಿವೆ. ಬಸವಣ್ಣನವರ ತತ್ವವನ್ನು ಅನುಸರಿಸುವವರು ತಮ್ಮ ನಂಬಿಕೆಯನ್ನು ವ್ಯಕ್ತಪಡಿಸುವ ಹಕ್ಕು ಹೊಂದಿದ್ದಾರೆ. ಅದೇ ರೀತಿ ಬಸವಣ್ಣನವರ ವಿಚಾರಗಳ ಬಗ್ಗೆ ಭಿನ್ನವಾದ ಧಾರ್ಮಿಕ ಅಥವಾ ತಾತ್ವಿಕ ನಿಲುವು ಹೊಂದಿರುವವರಿಗೂ ತಮ್ಮ ಅಭಿಪ್ರಾಯ ಹೇಳುವ ಹಕ್ಕಿದೆ. ಆದರೆ ಭಿನ್ನಾಭಿಪ್ರಾಯ ವ್ಯಕ್ತಪಡಿಸುವಾಗ ವ್ಯಕ್ತಿ ಅಥವಾ ಸಮುದಾಯವನ್ನು ಅವಮಾನಿಸುವ ಭಾಷೆ ಬಳಸುವುದು ಆರೋಗ್ಯಕರ ಚರ್ಚೆಗೆ ದಾರಿ ಮಾಡಿಕೊಡುವುದಿಲ್ಲ.

ವೈಚಾರಿಕ ಭಿನ್ನಾಭಿಪ್ರಾಯವನ್ನು ವೈಯಕ್ತಿಕ ನಿಂದನೆಯ ಮಟ್ಟಕ್ಕೆ ಇಳಿಸಿದಾಗ ವಿಚಾರದ ಮೌಲ್ಯವೇ ಕುಸಿಯುತ್ತದೆ. ಸತ್ಯದ ಪರವಾಗಿ ಮಾತನಾಡುವುದಾದರೆ ಸತ್ಯವನ್ನೇ ಮಾತನಾಡಬೇಕು. ತಪ್ಪನ್ನು ಪ್ರಶ್ನಿಸುವುದಾದರೆ ದಾಖಲೆ, ತರ್ಕ ಮತ್ತು ವಾಸ್ತವಾಂಶಗಳ ಆಧಾರದ ಮೇಲೆ ಪ್ರಶ್ನಿಸಬೇಕು. ಸುಳ್ಳು ಆರೋಪ, ಅವಹೇಳನಕಾರಿ ಪದಗಳು ಮತ್ತು ದ್ವೇಷದ ಮಾತುಗಳಿಂದ ಯಾರೂ ಶಾಶ್ವತವಾಗಿ ಗೆಲ್ಲಲು ಸಾಧ್ಯವಿಲ್ಲ. ಅಂತಹ ಮಾತುಗಳು ಕ್ಷಣಿಕವಾಗಿ ಚಪ್ಪಾಳೆ ಗಿಟ್ಟಿಸಬಹುದು; ಆದರೆ ದೀರ್ಘಾವಧಿಯಲ್ಲಿ ಅವು ಸಮಾಜದಲ್ಲಿ ಅನಗತ್ಯ ಕಂದಕಗಳನ್ನು ನಿರ್ಮಿಸುತ್ತವೆ. ಸಾಮಾಜಿಕ ಜೀವನದಲ್ಲಿ ಯಾರೂ ಪರಿಪೂರ್ಣರಲ್ಲ. ಲೋಪದೋಷಗಳು ಮನುಷ್ಯ ಸಹಜ. ರೈತರಲ್ಲಿಯೂ ತಪ್ಪುಗಳಿರಬಹುದು, ಸ್ವಾಮೀಜಿಗಳಲ್ಲಿಯೂ ತಪ್ಪುಗಳಿರಬಹುದು, ರಾಜಕಾರಣಿಗಳಲ್ಲಿಯೂ ತಪ್ಪುಗಳಿರಬಹುದು, ಪತ್ರಕರ್ತರು ಮತ್ತು ಸಾಹಿತಿಗಳಲ್ಲಿಯೂ ತಪ್ಪುಗಳಿರಬಹುದು. ತಪ್ಪು ಮಾಡಿದಾಗ ಅದನ್ನು ಪ್ರಶ್ನಿಸಬಾರದು ಎಂದಲ್ಲ. ಪ್ರಶ್ನಿಸಬೇಕು. ಆದರೆ ಪ್ರಶ್ನಿಸುವ ವಿಧಾನವೇ ನಮ್ಮ ಸಂಸ್ಕಾರವನ್ನು ತೋರಿಸುತ್ತದೆ. ತಪ್ಪನ್ನು ಖಂಡಿಸುವುದು ಒಂದು ವಿಚಾರ; ವ್ಯಕ್ತಿಯನ್ನು ತುಚ್ಛಗೊಳಿಸುವುದು ಮತ್ತೊಂದು ವಿಚಾರ. ಈ ಎರಡರ ನಡುವಿನ ವ್ಯತ್ಯಾಸವನ್ನು ನಾವು ಅರಿತುಕೊಳ್ಳಬೇಕಾಗಿದೆ. ಇಂದು ಸಾಮಾಜಿಕ ಜಾಲತಾಣಗಳು ಮತ್ತು ವಿವಿಧ ಮಾಧ್ಯಮಗಳ ಮೂಲಕ ಮಾತನಾಡುವ ಅವಕಾಶ ಎಲ್ಲರಿಗೂ ಸಿಕ್ಕಿದೆ. ಒಂದು ಮಾತು ಕ್ಷಣಾರ್ಧದಲ್ಲಿ ಸಾವಿರಾರು ಜನರನ್ನು ತಲುಪುತ್ತದೆ. ಹೀಗಾಗಿ ಸಾರ್ವಜನಿಕವಾಗಿ ಮಾತನಾಡುವ ಪ್ರತಿಯೊಬ್ಬರೂ ತಮ್ಮ ಮಾತಿನ ಪರಿಣಾಮವನ್ನು ಅರಿತುಕೊಳ್ಳಬೇಕು. ವಿಶೇಷವಾಗಿ ಸಮಾಜದಲ್ಲಿ ಪ್ರಭಾವ ಹೊಂದಿರುವ ವ್ಯಕ್ತಿಗಳ ಮಾತುಗಳು ಇನ್ನಷ್ಟು ಜವಾಬ್ದಾರಿಯುತವಾಗಿರಬೇಕು. ಅವರ ಒಂದು ಅಸಂಯಮಿತ ಹೇಳಿಕೆ ಅನೇಕ ಜನರ ಭಾವನೆಗಳಿಗೆ ಧಕ್ಕೆ ತರಬಹುದು ಮತ್ತು ಅನಗತ್ಯ ಸಂಘರ್ಷಕ್ಕೆ ಕಾರಣವಾಗಬಹುದು.

ಇಂತಹ ಸಂದರ್ಭದಲ್ಲಿ ನಮ್ಮ ಮುಂದೆ ಇರುವ ದೊಡ್ಡ ಪ್ರಶ್ನೆ ಏನೆಂದರೆ?ರಾಜ್ಯ ಬರಗಾಲದಂತಹ ಗಂಭೀರ ಸಂಕಷ್ಟವನ್ನು ಎದುರಿಸುತ್ತಿರುವಾಗ ನಮ್ಮ ಆದ್ಯತೆಗಳೇನು? ರೈತರ ಬದುಕು ಸಂಕಷ್ಟದಲ್ಲಿರುವಾಗ, ನೀರಿನ ಸಮಸ್ಯೆ ಕಾಡುತ್ತಿರುವಾಗ, ಗ್ರಾಮೀಣ ಜನರ ಆರ್ಥಿಕ ಪರಿಸ್ಥಿತಿ ದುರ್ಬಲವಾಗಿರುವಾಗ, ಸಮಾಜಕ್ಕೆ ಅಗತ್ಯವಿರುವ ಸಂದೇಶ ಯಾವುದು? ಜನರನ್ನು ಪರಸ್ಪರ ದ್ವೇಷಿಸುವಂತೆ ಮಾಡುವ ಮಾತುಗಳೋ, ಅಥವಾ ಸಂಕಷ್ಟದ ಸಮಯದಲ್ಲಿ ಒಬ್ಬರಿಗೊಬ್ಬರು ನೆರವಾಗುವಂತೆ ಮಾಡುವ ಮಾತುಗಳೋ ಸಮಾವೇಶಗಳು, ಧಾರ್ಮಿಕ ಕಾರ್ಯಕ್ರಮಗಳು ಅಥವಾ ಸಾಮಾಜಿಕ ಸಭೆಗಳು ನಡೆಯಬಾರದು ಎಂಬ ಮಾತಲ್ಲ. ಪ್ರತಿಯೊಬ್ಬರಿಗೂ ತನ್ನ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ನಡೆಸುವ ಹಕ್ಕಿದೆ. ಆದರೆ ಕಾಲದ ಅಗತ್ಯವನ್ನು ಅರ್ಥಮಾಡಿಕೊಳ್ಳುವ ವಿವೇಕವೂ ಬೇಕು. ಸಮಾಜ ಸಂಕಷ್ಟದಲ್ಲಿರುವಾಗ ದೊಡ್ಡ ದೊಡ್ಡ ವೇದಿಕೆಗಳಿಂದ ಜನಜಾಗೃತಿ ಮೂಡಿಸುವ ಕೆಲಸ ಮಾಡಬಹುದು. ನೀರಿನ ಸಂರಕ್ಷಣೆ, ಪರಿಸರ ರಕ್ಷಣೆ, ರೈತರ ಆತ್ಮಸ್ಥೈರ್ಯ, ಗ್ರಾಮೀಣ ಬದುಕಿನ ಸಮಸ್ಯೆಗಳು, ಮೂಢನಂಬಿಕೆಗಳ ನಿರ್ಮೂಲನೆ, ಶಿಕ್ಷಣ ಮತ್ತು ಸಾಮಾಜಿಕ ಸಾಮರಸ್ಯದಂತಹ ವಿಷಯಗಳ ಕುರಿತು ಜನರನ್ನು ಜಾಗೃತಗೊಳಿಸಿದರೆ ಆ ಕಾರ್ಯಕ್ರಮಗಳಿಗೆ ಇನ್ನಷ್ಟು ಅರ್ಥ ಬರುತ್ತದೆ.

**ಸಾಮಾನ್ಯ ಮನುಷ್ಯ ಜಾಗೃತನಾದರೆ ದೇಶ**

ಸದೃಢವಾಗುತ್ತದೆ. ಒಬ್ಬ ನಾಗರಿಕ ತನ್ನ ಜವಾಬ್ದಾರಿಯನ್ನು ಅರಿತುಕೊಂಡರೆ ಕುಟುಂಬ ಬಲವಾಗುತ್ತದೆ; ಕುಟುಂಬ ಬಲವಾದರೆ ಸಮಾಜ ಬಲವಾಗುತ್ತದೆ; ಸಮಾಜ ಬಲವಾದರೆ ರಾಷ್ಟ್ರ ಬಲವಾಗುತ್ತದೆ. ಆದ್ದರಿಂದ ಸಾರ್ವಜನಿಕ ವೇದಿಕೆಗಳು ಜನರನ್ನು ಬಡಿದೆಬ್ಬಿಸುವ, ಪ್ರಶ್ನಿಸುವ, ಚಿಂತಿಸುವ ಮತ್ತು ಜವಾಬ್ದಾರಿಯುತ ನಾಗರಿಕರನ್ನಾಗಿ ರೂಪಿಸುವ ಕೆಲಸ ಮಾಡಬೇಕು. ವಿರೋಧಿಸುವ ಹಕ್ಕು ಪ್ರಜಾಪ್ರಭುತ್ವದ ಶಕ್ತಿ. ಆದರೆ ವಿರೋಧಿಸುವ ಭರದಲ್ಲಿ ತುಚ್ಛವಾಗಿ ಬಯ್ಯುವುದು ಪ್ರಜಾಪ್ರಭುತ್ವದ ಸಂಸ್ಕೃತಿಗೆ ಶಕ್ತಿ ನೀಡುವುದಿಲ್ಲ. ಅದು ವ್ಯಕ್ತಿಯ ವಿಚಾರದ ಬಲವನ್ನು ದುರ್ಬಲಗೊಳಿಸುತ್ತದೆ. ನಮ್ಮ ಮಾತಿನಲ್ಲಿ ಕಠಿಣತೆ ಇರಬಹುದು; ಆದರೆ ಕೀಳುತನ ಇರಬಾರದು. ಪ್ರಶ್ನೆ ಇರಬಹುದು; ಆದರೆ ಅವಮಾನ ಇರಬಾರದು. ಟೀಕೆ ಇರಬಹುದು; ಆದರೆ ದ್ವೇಷ ಇರಬಾರದು. ಭಿನ್ನಾಭಿಪ್ರಾಯ ಇರಬಹುದು; ಆದರೆ ಮಾನವೀಯತೆ ಕಳೆದುಹೋಗಬಾರದು. ರೈತರು ನಮ್ಮ ಅನ್ನದಾತರು. ಧಾರ್ಮಿಕ ಮತ್ತು ಸಾಮಾಜಿಕ ಮುಖಂಡರು ಸಮಾಜದ ಮೇಲೆ ಪ್ರಭಾವ ಬೀರುವ ವ್ಯಕ್ತಿಗಳು. ಇಬ್ಬರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಜನರೊಂದಿಗೆ ನಿಕಟ ಸಂಬಂಧ ಹೊಂದಿರುವವರು. ಹೀಗಾಗಿ ಅವರ ಮಾತುಗಳಲ್ಲಿ ಸ್ವಲ್ಪ ಹಿಡಿತವಿದ್ದರೆ ಅವರ ವ್ಯಕ್ತಿತ್ವ ಇನ್ನಷ್ಟು ಎತ್ತರಕ್ಕೆ ಏರುತ್ತದೆ. ಮಾತು ಮಿತವಾಗಿದ್ದಷ್ಟೂ ಅದರ ತೂಕ ಹೆಚ್ಚುತ್ತದೆ. ಮಾತು ಹಿತವಾಗಿದ್ದಷ್ಟೂ ಅದರ ಪರಿಣಾಮ ಗಾಢವಾಗುತ್ತದೆ. ಸಮಾಜಕ್ಕೆ ಇಂದು ಬೇಕಾಗಿರುವುದು ಪರಸ್ಪರರನ್ನು ಕೆಳಕ್ಕೆ ಎಳೆಯುವ ಭಾಷೆಯಲ್ಲ; ಒಬ್ಬರನ್ನೊಬ್ಬರು ಮೇಲಕ್ಕೆತ್ತುವ ಭಾಷೆ. ದ್ವೇಷದ ಬೀಜ ಬಿತ್ತುವ ಮಾತುಗಳಲ್ಲ; ಸಾಮರಸ್ಯದ ಬೀಜ ಬಿತ್ತುವ ಮಾತುಗಳು. ಸಂಕಷ್ಟದ ಸಂದರ್ಭದಲ್ಲಿ ಜನರನ್ನು ವಿಭಜಿಸುವುದಕ್ಕಿಂತ ಒಗ್ಗೂಡಿಸುವುದು ಹೆಚ್ಚು ಅಗತ್ಯ. ಬರಗಾಲದ ನೋವಿನ ನಡುವೆ ಪರಸ್ಪರ ಆರೋಪ–ಪ್ರತ್ಯಾರೋಪಗಳಲ್ಲಿ ಕಾಲ ಕಳೆಯುವುದಕ್ಕಿಂತ ರೈತರ ಬದುಕಿಗೆ, ಪರಿಸರ ಸಂರಕ್ಷಣೆಗೆ ಮತ್ತು ನೀರಿನ ಭದ್ರತೆಗೆ ಪರಿಹಾರ ಹುಡುಕುವುದು ಕಾಲದ ಕರೆಯಾಗಿದೆ.

ಆದ್ದರಿಂದ ಸಾರ್ವಜನಿಕ ಜೀವನದಲ್ಲಿರುವ ಪ್ರತಿಯೊಬ್ಬರೂ ತಮ್ಮ ಮಾತಿನ ಶಕ್ತಿಯನ್ನು ಅರಿಯಬೇಕು. ಮಾತು ಒಂದು ಆಯುಧವೂ ಆಗಬಹುದು, ಔಷಧವೂ ಆಗಬಹುದು. ಅದು ಗಾಯ ಮಾಡಬಹುದು; ಅದೇ ಮಾತು ಗಾಯಕ್ಕೆ ಮುಲಾಮಾಗಬಹುದು. ಯಾವ ಮಾತನ್ನು ಆಯ್ಕೆ ಮಾಡಬೇಕು ಎಂಬುದು ನಮ್ಮ ವಿವೇಕಕ್ಕೆ ಬಿಟ್ಟದ್ದು. ವಿರೋಧಿಸಿ, ಪ್ರಶ್ನಿಸಿ, ಹೋರಾಡಿ?ಅದು ಪ್ರಜಾಪ್ರಭುತ್ವದ ಹಕ್ಕು. ಆದರೆ ಭಾಷೆಯಲ್ಲಿ ಘನತೆ ಇರಲಿ, ಮಾತಿನಲ್ಲಿ ಗೌರವ ಇರಲಿ, ವಿಚಾರದಲ್ಲಿ ಸತ್ಯ ಇರಲಿ, ಅಭಿವ್ಯಕ್ತಿಯಲ್ಲಿ ಮಾನವೀಯತೆ ಇರಲಿ. ಇನ್ನೊಬ್ಬರನ್ನು ತುಚ್ಛಗೊಳಿಸುವ ಮೂಲಕ ನಮ್ಮ ವ್ಯಕ್ತಿತ್ವ ದೊಡ್ಡದಾಗುವುದಿಲ್ಲ. ಬದಲಾಗಿ, ಭಿನ್ನಾಭಿಪ್ರಾಯದ ನಡುವೆಯೂ ಮತ್ತೊಬ್ಬರ ಘನತೆಯನ್ನು ಗೌರವಿಸುವ ಸಾಮರ್ಥ್ಯವೇ ನಮ್ಮ ವ್ಯಕ್ತಿತ್ವದ ನಿಜವಾದ ಎತ್ತರವನ್ನು ತೋರಿಸುತ್ತದೆ.ಇದೇ ಈ ನಾಡಿನ ಪ್ರಜ್ಞಾವಂತರ ಆಶಯ. ಮಾತು ಮಿತವಿರಲಿ, ಹಿತವಿರಲಿ; ವಿರೋಧವಿರಲಿ, ಆದರೆ ದ್ವೇಷವಿರದಿರಲಿ. ಸಂಕಷ್ಟದ ಕಾಲದಲ್ಲಿ ಸಮಾಜವನ್ನು ಒಡೆಯುವ ಬದಲು ಜೋಡಿಸುವ ಕೆಲಸವಾಗಲಿ. ಆಗ ಮಾತ್ರ ನಮ್ಮ ಪ್ರಜಾಪ್ರಭುತ್ವದ ಮೌಲ್ಯವೂ ಉಳಿಯುತ್ತದೆ, ನಮ್ಮ ಸಾಮಾಜಿಕ ಬದುಕಿನ ಘನತೆಯೂ ಉಳಿಯುತ್ತದೆ.

ಸಂಗಮೇಶ ಎನ್ ಜವಾದಿ,
ಬರಹಗಾರರು, ಪರಿಸರ ಸಂರಕ್ಷಕರು,
ಹೋರಾಟಗಾರರು, ಬೀದರ್ ಜಿಲ್ಲೆ.



ಈ ನಮ್ಮ ಧೃತಿ ನ್ಯೂಸ್
E NAMMA DHURTHI NEWS
KANNADA DAILY NEWS PAPER

## ಹಾಸನಾಂಬ ಮಹೋತ್ಸವಕ್ಕೆ ವಿಶೇಷ ರೈಲುಗಳ ವ್ಯವಸ್ಥೆ ಕಲ್ಪಿಸಲು ಮನವಿ



ಹಾಸನ: ಹಾಸನಾಂಬ ದೇವಿ ದರ್ಶನ ಹಾಗೂ ಶ್ರೀ ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವಕ್ಕೆ ರಾಜ್ಯದ ವಿವಿಧ ಭಾಗಗಳಿಂದ ಲಕ್ಷಾಂತರ ಭಕ್ತರು ಆಗಮಿಸುವ ನಿರೀಕ್ಷೆಯಿರುವ ಹಿನ್ನೆಲೆಯಲ್ಲಿ ವಿಶೇಷ ರೈಲುಗಳ ವ್ಯವಸ್ಥೆ ಕಲ್ಪಿಸುವಂತೆ ಸಂಸದ ಶ್ರೇಯಸ್ ಎಂ. ಪಟೇಲ್ ಅವರು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರಿಗೆ ಮನವಿ ಮಾಡಿದ್ದಾರೆ.

ಅಕ್ಟೋಬರ್ 29ರಿಂದ ನವೆಂಬರ್ 11ರವರೆಗೆ ನಡೆಯಲಿರುವ ಜಾತ್ರಾಮಹೋತ್ಸವಕ್ಕೆ ರಾಜ್ಯದ ವಿವಿಧ ಮೂಲೆಗಳಿಂದ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಲಿದ್ದು, ಬೆಂಗಳೂರು–ಹಾಸನ, ಬೆಂಗಳೂರು– ಮೈಸೂರು, ಹಾಸನ–ಮೈಸೂರು, ಮಂಗಳೂರು–ಹಾಸನ, ಮಂಗಳೂರು ಹಾಗೂ ಹುಬ್ಬಳ್ಳಿ ಹಾಸನ ಹುಬ್ಬಳ್ಳಿ ಮಾರ್ಗಗಳಲ್ಲಿ ಅಕ್ಟೋಬರ್ 28ರಿಂದ ನವೆಂಬರ್ 12ರವರೆಗೆ ವಿಶೇಷ ರೈಲುಗಳನ್ನು ಓಡಿಸುವಂತೆ ಅವರು ಕೋರಿದ್ದಾರೆ. ಹಾಸನ ಮಾರ್ಗವಾಗಿ ಸಂಚರಿಸುವ ನಿಯಮಿತ ರೈಲುಗಳಿಗೆ ಹೆಚ್ಚುವರಿ ಬೋಗಿಗಳನ್ನು ಅಳವಡಿಸುವುದು, ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ಮುಂಜಾನೆ ಹಾಗೂ ತಡರಾತ್ರಿ ರೈಲು ಸೇವೆ ಒದಗಿಸುವುದು ಮತ್ತು ಹಾಸನ ರೈಲು ನಿಲ್ದಾಣದಲ್ಲಿ ಹೆಚ್ಚುವರಿ ಟಿಕೆಟ್ ಹಾಗೂ ವಿಚಾರಣಾ ಕೌಂಟ–ರ್‌ಗಳನ್ನು ತೆರೆಯುವಂತೆ ಮನವಿ ಮಾಡಿದ್ದಾರೆ. ಮಹೋತ್ಸವದ ಸಂದರ್ಭದಲ್ಲಿ ರೈಲು ನಿಲ್ದಾಣದಲ್ಲಿ ಸಾಕಷ್ಟು ಆರ್‌ಪಿಎಫ್ ಸಿಬ್ಬಂದಿ ನಿಯೋಜನೆ, ವೈದ್ಯಕೀಯ ನೆರವು, ಜನದಟ್ಟಣೆ ನಿಯಂತ್ರಣ, ಕುಡಿಯುವ ನೀರು ಹಾಗೂ ಸ್ವಚ್ಛತಾ ವ್ಯವಸ್ಥೆ ಸೇರಿದಂತೆ ಅಗತ್ಯ ಮೂಲಸೌಲಭ್ಯ ಕಲ್ಪಿಸಬೇಕು. ರೈಲುಗಳ ಮಾರ್ಗ, ಸಮಯ ಹಾಗೂ ಟಿಕೆಟ್ ಕಾಯ್ದಿರಿಸುವಿಕೆ ಕು–ರಿತು ಮಾಹಿತಿಯನ್ನು ಮುಂಚಿತವಾಗಿ ಪ್ರಕಟಿಸುವಂತೆಯೂ ಸಂಸದರು ತಿಳಿಸಿದ್ದಾರೆ. ಪ್ರಯಾಣಿಕರ ಬೇಡಿಕೆ ಮತ್ತು ರೈಲುಗಳ ಕಾರ್ಯಾಚರಣೆಯ ಸಾಧ್ಯತೆಗಳನ್ನು ತಕ್ಷಣ ಪರಿಶೀಲಿಸಿ, ಪ್ರಸ್ತಾವನೆಯನ್ನು ನೈರುತ್ಯ ರೈಲ್ವೆ ಮುಖ್ಯ ಕಚೇರಿಗೆ ಸಲ್ಲಿಸುವಂತೆ ಮೈಸೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಿಗೆ ನಿರ್ದೇಶನ ನೀಡಬೇಕು ಎಂದು ಅವರು ಮನವಿ ಮಾಡಿದ್ದಾರೆ. ವಿಶೇಷ ರೈಲು ಸೇವೆಗಳಿಂದ ಭಕ್ತರಿಗೆ ಸುರಕ್ಷಿತ ಹಾಗೂ ಅನುಕೂಲಕರ ಪ್ರಯಾಣ ಸೌಲಭ್ಯ ದೊರೆಯುವುದರ ಜತೆಗೆ ಮಹೋತ್ಸವದ ಅವಧಿಯಲ್ಲಿ ರಸ್ತೆ ಸಂಚಾರದ ದಟ್ಟಣೆಯನ್ನೂ ಕಡಿಮೆ ಮಾಡಲು ಸಹಕಾರಿಯಾಗಲಿದೆ ಎಂದು ಶ್ರೇಯಸ್ ಪಟೇಲ್ ತಿಳಿಸಿದ್ದಾರೆ.

## CEC ಗ್ಯಾನೇಶ್ ಕುಮಾರ್ ಮನೆ ವಿರೂಪಗೊಳಿಸಿದ 20 ಕಾಂಗ್ರೆಸ್ ಕಾರ್ಯಕರ್ತರ ವಿರುದ್ಧ ಕೊಲೆ ಯತ್ನ ಕೇಸ್

ಆಗ್ರಾ: ಇಲ್ಲಿನ ವಿಜಯನಗರ ಪ್ರದೇಶದಲ್ಲಿರುವ ಮುಖ್ಯ ಚುನಾವಣಾ ಆಯುಕ್ತ ಗ್ಯಾನೇಶ್ ಕುಮಾರ್ ಅವರ ನಿವಾಸದ ಮುಂದೆ ನಡೆದ ಪ್ರತಿಭಟನೆಯ ವೇಳೆ ಅವರ ಮನೆಯನ್ನು ವಿರೂಪಗೊಳಿಸಿದ ಆರೋಪದ ಮೇಲೆ ಸುಮಾರು 20 ಕಾಂಗ್ರೆಸ್ ಕಾರ್ಯಕರ್ತರ ವಿರುದ್ಧ ಕೊಲೆ ಯತ್ನ, ಗಂಭೀರ ಸ್ವರೂಪದ ಗಾಯವನ್ನುಂಟುಮಾಡುವುದು ಮತ್ತು ಗಲಭೆ ಸೃಷ್ಟಿಸಿದ ಆರೋಪದಡಿ ಪ್ರಕರಣ ದಾಖಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.



ಈ ಪೈಕಿ ಆರು ಮಂದಿಯನ್ನು ಬಂಧಿಸಲಾಗಿದೆ. ಕುಮಾರ್ ಅವರ ನಿವಾಸದ ಹೊರಗೆ ನಡೆದ ಪ್ರತಿಭಟನೆಯ ನಂತರ ಈ ಕ್ರಮ ಕೈಗೊಳ್ಳಲಾಗಿದೆ. ಈ ವೇಳೆ ಕಾಂಗ್ರೆಸ್ ಕಾರ್ಯಕರ್ತರು ಸ್ಥಳದಿಂದ ತೆರಳುವ ಮುನ್ನ ಮನೆಯ ಗೇಟ್ ಮತ್ತು ಗೋಡೆಯ ಮೇಲೆ ಕಪ್ಪು ಬಣ್ಣದಿಂದ ಘೋಷಣೆಗಳನ್ನು ಬರೆದಿದ್ದರು ಎಂದು ಆರೋಪಿಸಲಾಗಿದೆ. ಬಂಧಿತ ಆರು ಆರೋಪಿಗಳಾದ ಕಾಂಗ್ರೆಸ್ ಮುಖಂಡರಾದ ಅನಿಲ್ ಯಾದವ್, ಮುಕೇಶ್ ಧಂಗರ್, ಮನೋಜ್ ಗೌರ್, ರಾಜೇಶ್ ಕುಮಾರ್, ರಾಜಾ ಗೌತಮ್ ಮತ್ತು ಪಂಕಜ್ ಚೌಧರಿ ಅವರನ್ನು ನಿನ್ನೆ ಜೈಲಿಗೆ ಕಳುಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಹೆಸ–ರಿಸಲಾದ ಎಂಟು ಮಂದಿ ಹಾಗೂ ಗುರುತಿಸಲಾಗದ 15–20 ಕಾಂಗ್ರೆಸ್ ಕಾರ್ಯಕರ್ತರ ವಿರುದ್ಧ ಸಬ್ ಇನ್‌ಸ್ಪೆಕ್ಟರ್ ಗೌರವ್ ಗುಪ್ತಾ ನೀಡಿದ ಲಿಖಿತ ದೂರಿನ ಆಧಾರದ ಮೇಲೆ ಹರಿಪರ್ವತ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಅಡಿಯಲ್ಲಿ ಸೆಕ್ಷನ್ 109 (ಕೊಲೆ ಯತ್ನ), 121 (ಸಾರ್ವಜನಿಕ ಸೇವಕರು ತಮ್ಮ ಕರ್ತವ್ಯ ನಿರ್ವಹಿಸದಂತೆ ತಡೆಯಲು ಉದ್ದೇಶಪೂರ್ವಕವಾಗಿ ಗಂಭೀರ ಗಾಯವನ್ನುಂಟುಮಾಡುವುದು), 126 (ಅಕ್ರಮ ನಿರ್ಬಂಧ), 132 (ಸಾರ್ವಜನಿಕ ಸೇವಕರ ಮೇಲೆ ಹಲ್ಲೆ ಅಥವಾ ಕ್ರಿಮಿನಲ್ ಬಲಪ್ರಯೋಗ), 191 (ಬಲ ಅಥವಾ ಹಿಂಸೆಯನ್ನು ಬಳಸುವ ಕಾನೂನುಬಾಹಿರ ಗುಂಪಿನಿಂದ ಗಲಭೆ), 333 (ಗಾಯ, ಹಲ್ಲೆ ಅಥವಾ ಅಕ್ರಮ ನಿರ್ಬಂಧಕ್ಕೆ ಸಿದ್ಧತೆ ನಡೆಸಿದ ನಂತರ ಮನೆಗೆ ಅಕ್ರಮ ಪ್ರವೇಶ), 351(2) (ಕ್ರಿಮಿನಲ್ ಬೆದರಿಕೆ) ಮತ್ತು 352 (ಶಾಂತಿ ಭಂಗವನ್ನು ಪ್ರಚೋದಿಸುವ ಉದ್ದೇಶದಿಂದ ಮಾಡಿದ ಅವಮಾನ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಪ್ರಕರಣವು ಪ್ರತಿಭಟನೆಗೆ ಸಂಬಂಧಿಸಿದ ನಿಬಂಧನೆಗಳಿಗೆ ಸೀಮಿತವಾಗಿರಬೇಕಿತ್ತು. ಆದರೆ ಪೊಲೀಸರು ಕಾರ್ಯಕರ್ತರ ವಿರುದ್ಧ ಹಲವಾರು ಸುಳ್ಳು ಸೆಕ್ಷನ್‌ಗಳನ್ನು ಹೇರಿದ್ದಾರೆ ಎಂದು ಕಾಂಗ್ರೆಸ್ ನಗರ ಅಧ್ಯಕ್ಷ ಅಮಿತ್ ಸಿಂಗ್ ಹೇಳಿದ್ದಾರೆ. ಕಾಂಗ್ರೆಸ್ ನಿಯೋಗವೊಂದು ಬುಧವಾರ ಪೊಲೀಸ್ ಆಯುಕ್ತರನ್ನು ಭೇಟಿ ಮಾಡಿ, ಆರೋಪಿಸಲಾದ ಸುಳ್ಳು ಪ್ರಕರಣಗಳನ್ನು ಕೈಬಿಡುವಂತೆ ಒತ್ತಾಯಿಸಲಿದೆ ಎಂದು ಅವರು ತಿಳಿಸಿದ್ದಾರೆ. ಈ ಘಟನೆಯು ಕುಮಾರ್ ವಿರುದ್ಧ ಕಾಂಗ್ರೆಸ್ ನಡೆಸಿದ ರಾಜ್ಯವ್ಯಾಪಿ ಪ್ರತಿಭಟನೆಯ ಭಾಗವಾಗಿತ್ತು.

# ಸೂರ್ಯಕಾಂತಿ, ಹೆಸರುಕಾಳು, ಸೋಯಾಬೀನ್‌ಗೆ ಬೆಂಬಲ ಬೆಲೆ ; ಹೆಚ್‌ಡಿಕೆ

ಬೆಂಗಳೂರು: ಖಾರಿಫ್ 2026–27ನೇ ಸಾಲಿಗೆ ಕರ್ನಾಟಕದಲ್ಲಿ ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ 13,413 ಮೆಟ್ರಿಕ್ ಟನ್ ಸೂರ್ಯಕಾಂತಿ, 38,250 ಮೆಟ್ರಿಕ್ ಟನ್ ಹೆಸರುಕಾಳು (ಮೂಂಗ್) ಮತ್ತು 1,15,500 ಮೆಟ್ರಿಕ್ ಟನ್ ಸೋಯಾಬೀನ್ ಖರೀದಿಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ.



ಕನಿಷ್ಠ ಬೆಂಬಲ ಬೆಲೆಯಲ್ಲಿ ಖರೀದಿಸುವ ಮೂಲಕ ಈ ಅನುಮೋದನೆಗಳು ರೈತರಿಗೆ ಬೆಂಬಲ ನೀಡಲಿವೆ ಎಂದು ಹೇಳಿದ ಅವರು, ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಕೃಷಿ ಹಾಗೂ ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವ–ರಿಗೆ ಧನ್ಯವಾದ ಅರ್ಪಿಸಿದರು. ಈ ಅನುಮೋದನೆಗಳು ಎಂಎಸ್‌ಪಿ ಮೂಲಕ ಖರೀದಿಸುವ ಮೂಲಕ ರೈತರಿಗೆ ಪ್ರಮುಖ ಬೆಂಬಲವನ್ನು ಒದಗಿಸುತ್ತವೆ, ಎಂದು ಕುಮಾರಸ್ವಾಮಿ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಕೃಷಿ ಮತ್ತು ರೈತ ಕಲ್ಯಾಣ ಇಲಾಖೆಯು ಸೆಪ್ಟೆಂಬರ್ 29 ರಂದು ಹೊರಡಿಸಿದ ಮೂರು ಪ್ರತ್ಯೇಕ ಪತ್ರಗಳ ಮೂಲಕ ಕರ್ನಾಟಕದಲ್ಲಿ ಈ ಮೂರು ಬೆಳೆಗಳ ಬೆಲೆ ಬೆಂಬಲ ಯೋಜನೆ ಅಡಿಯಲ್ಲಿ ಖರೀದಿಗೆ ಅನುಮೋದನೆ ನೀಡಿದೆ. ಕರ್ನಾಟಕ ಸರ್ಕಾರದ ಮನವಿಗಳ ಮೇರೆಗೆ ಈ ಅನುಮೋದನೆಗಳನ್ನು ನೀಡಲಾಗಿದ್ದು, ಸೂರ್ಯಕಾಂತಿ ಮತ್ತು ಹೆಸರುಕಾಳಿಗೆ ಆಗಸ್ಟ್ 11 ರಂದು ಹಾಗೂ ಸೋಯಾಬೀನ್‌ಗೆ ಆಗಸ್ಟ್ 17 ರಂದು ರಾಜ್ಯ ಸರ್ಕಾರ ಕಳುಹಿಸಿದ್ದ ಪತ್ರಗಳನ್ನು ಇದಕ್ಕಾಗಿ ಉಲ್ಲೇಖಿಸಲಾಗಿದೆ. ಖರೀದಿ ಪ್ರಕ್ರಿಯೆಯು ಪ್ರಾರಂಭವಾದ ದಿನಾಂಕದಿಂದ 90 ದಿನಗಳವರೆಗೆ ನಡೆಯಲಿದ್ದು, ಪ್ರಾರಂಭದ ದಿನಾಂಕವನ್ನು ರಾಜ್ಯ ಸರ್ಕಾರ ನಿರ್ಧರಿಸಲಿದೆ. ಖರೀದಿ ಪ್ರಾರಂಭವಾಗುವ ದಿನಾಂಕದ ಕು–ರಿತು ಕೇಂದ್ರಕ್ಕೆ ಮಾಹಿತಿ ನೀಡುವಂತೆ ಕೇಂದ್ರ ನೋಡಲ್ ಏಜೆನ್ಸಿಗಳಿಗೆ ಸೂಚಿಸಲಾಗಿದೆ. ಖರೀದಿಗೆ ಮುನ್ನ ವೈಜ್ಞಾನಿಕ ಶೇಖರಣಾ ಸ್ಥಳದ ಲಭ್ಯತೆಯನ್ನು ಪರಿಶೀಲಿಸಲು ಮತ್ತು ಶೇಖರಣಾ ಸೌಲಭ್ಯ ಖಚಿತವಾಗಿರುವ ಪ್ರಮಾಣಕ್ಕೆ ಮಾತ್ರ ಖರೀದಿಯನ್ನು ಸೀಮಿತಗೊಳಿಸಲು ಏಜೆನ್ಸಿಗಳಿಗೆ ನಿರ್ದೇಶನ ನೀಡಲಾಗಿದೆ. ನೋಂದಾಯಿತ ರೈತರ ಆಧಾರ್ ಆಧಾರಿತ ಬಯೋಮೆಟ್ರಿಕ್ ಅಥವಾ ಮುಖದ ದೃಢೀಕರಣದ ಮೂಲಕವೇ ಖರೀದಿ ನಡೆಸಬೇಕು ಮತ್ತು ಕೇವಲ ಉತ್ತಮ ಸರಾಸರಿ ಗುಣಮಟ್ಟ ಉತ್ಪನ್ನಗಳನ್ನು ಮಾತ್ರ ಖರೀದಿಸಬೇಕು ಎಂದು ಕೇಂದ್ರ ತಿಳಿಸಿದೆ. ಮಾರುಕಟ್ಟೆ ದರಗಳು ಎಂಎಸ್‌ಪಿಗಿಂತ ಕಡಿಮೆಯಿದ್ದಾಗ ಮಾತ್ರ ಖರೀದಿ ಪ್ರಕ್ರಿಯೆ ನಡೆಯಬೇಕು.

ಅನುಮೋದಿತ ಪ್ರಮಾಣದ ಖರೀದಿ ವೆಚ್ಚದ ಕನಿಷ್ಠ ಶೇಕಡಾ 15 ರಷ್ಟಕ್ಕೆ ಸಮಾನವಾದ ರಿವಾಲ್ವಿಂಗ್ ಫಂಡ್ (ತಿರುಗುವ ನಿಧಿ) ಒದಗಿಸಲು ಮತ್ತು ಖರೀದಿಯಾದ ಮೂರು ದಿನಗಳೊಳಗೆ ರೈತರ ಬ್ಯಾಂಕ್ ಖಾತೆಗಳಿಗೆ ನೇರ ಪಾವತಿಯನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರಕ್ಕೆ ಸೂಚಿಸಲಾಗಿದೆ. ಅಲ್ಲದೆ, ಸಂಪೂರ್ಣ ಪಿಎಸ್‌ಎಸ್ ಕಾರ್ಯಾಚರಣೆಯನ್ನು ಮಂಡಿ ತೆರಿಗೆಗಳು ಅಥವಾ ಸೆಸ್‌ನಿಂದ ವಿನಾಯಿತಿ ನೀಡಲು ಮತ್ತು ಕೇಂದ್ರ ನೋಡಲ್ ಏಜೆನ್ಸಿಗಳು ನೇರ ಖರೀದಿ ಕೇಂದ್ರಗಳನ್ನು ಸ್ಥಾಪಿಸಲು ಬೆಂಬಲ ನೀಡುವಂತೆಯೂ ಸೂಚಿಸಲಾಗಿದೆ.

# ನಾಪತ್ತೆಯಾಗಿದ್ದ JEE ಪರ್ವೇಜ್ ಭೋಪಾಲ್‌ನಲ್ಲಿ ಪತ್ತೆ

ಬೆಂಗಳೂರು: ನಾಪತ್ತೆಯಾಗಿದ್ದ ಗದಗದ ಕೆಆರ್‌ಐಡಿಎಲ್ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಪರ್ವೇಜ್ ಧಾರವಾಡ ಅವರು ಭೋಪಾಲ್‌ನಲ್ಲಿ ಪತ್ತೆಯಾಗಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ಕಾಮಗಾರಿಗಳಿಗೆ ಅಗತ್ಯ ಅನುದಾನ ಬಿಡುಗಡೆಯಾಗದಿರುವುದು ಹಾಗೂ ಗುತ್ತಿಗೆದಾರರಿಂದ ಬಿಲ್ ಪಾವತಿಗೆ ಸಂಬಂಧಿಸಿದ ಒತ್ತಡ ಎದುರಾಗಿರುವ ಬಗ್ಗೆ ಪರ್ವೇಜ್ ಅವರು ಸೆಪ್ಟೆಂಬರ್ 12ರಂದು ಕೆಆರ್‌ಐಡಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದಿದ್ದರು. ಬಳಿಕ ಸೆಪ್ಟೆಂಬರ್ 13ರಂದು ಬೆಂಗಳೂರಿನಲ್ಲಿ ಸಭೆ ಇದೆ ಎಂದು ಮನೆಯಿಂದ ತೆರಳಿದ್ದ ಅವರು ನಾಪತ್ತೆಯಾಗಿದ್ದರು. ಹಲವು ದಿನಗಳಾದರೂ ಪರ್ವೇಜ್ ಮನೆಗೆ ಮರಳದ ಹಿನ್ನೆಲೆಯಲ್ಲಿ ಕುಟುಂಬಸ್ಥರು ಆತಂಕಗೊಂಡಿದ್ದರು. ಸೆಪ್ಟೆಂಬರ್ 16ರಂದು ಗದಗದ ಬೆಟಗೇರಿ ಬಡಾವಣೆ ಪೊಲೀಸ್ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಾಗಿತ್ತು. ಪರ್ವೇಜ್ ಅವರ ಪತ್ತೆಗಾಗಿ ಪೊಲೀಸರು ಐದು ತಂಡಗಳನ್ನು ರಚಿಸಿ ವಿವಿಧ ಆಯಾಮಗಳಲ್ಲಿ ಶೋಧ ನಡೆಸುತ್ತಿದ್ದರು. ನಾಪತ್ತೆಯಾಗುವ ಮುನ್ನ ಬರೆದಿದ್ದಾರೆ ಎನ್ನಲಾದ ಪತ್ರದಲ್ಲಿ ಅನುದಾನದ ಕೊರತೆ, ಕಾಮಗಾರಿಗಳ ಬಾಕಿ ಪಾವತಿ ಹಾಗೂ ಗುತ್ತಿಗೆದಾರರಿಂದ ಎದುರಾಗಿರುವ ಒತ್ತಡದ ಬಗ್ಗೆ ಉಲ್ಲೇಖಿಸಿದ್ದರು. ತಮ ವೈಯಕ್ತಿಕ ಜೀವನದ ಮೇಲೂ ಈ ಪರಿಸ್ಥಿತಿ ಪರಿಣಾಮ ಬೀರುತ್ತಿದೆ ಎಂದು ಪತ್ರದಲ್ಲಿ ಆತಂಕ ವ್ಯಕ್ತಪಡಿಸಿದ್ದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈ ಮೊದಲು ಪರ್ವೇಜ್ ಪ್ರಕರಣಕ್ಕೆ ಪ್ರತಿಕ್ರಿಯಿಸಿ, ಇದು ಆತನ ಚಾಳಿಯಾಗಿದೆ. ಕಾಮಗಾರಿಗಳ ಸ್ಥಳ ಪರಿಶೀಲನೆ ಸರಿಯಾಗಿ ಮಾಡುತ್ತಿಲ್ಲ. ವಿಡಿಯೋ ಚಿತ್ರೀಕರಣ ಕೂಡ ಮಾಡಿಸುತ್ತಿಲ್ಲ. ಈ ಬಗ್ಗೆ ಬಿಜೆಪಿ ಶಾಸಕರೇ ತನಿಖೆಗೆ ಒತ್ತಾಯಿಸಿ ದೂರು ನೀಡಿದ್ದರು. ಅಧಿಕಾರಿಗಳು ವಿಚಾರಣೆಗೆ ಕ್ರಮ ಕೈಗೊಂಡಾಗ ನಾಪತ್ತೆಯಾಗಿದ್ದಾನೆ. ಈ ಮೊದಲು ಇದೇ ರೀತಿ ನಾಪತ್ತೆಯಾಗಿದ್ದ. ಅಜೀರ್ ಹಾಗೂ ಇತರೆಡೆ ತಿರುಗಾಡುತ್ತಿದ್ದ ಆತನನ್ನು ಕೊನೆಗೆ ಹೈದರಾಬಾದ್ ನಲ್ಲಿ ಪತ್ತೆ ಹಚ್ಚಿ ಕರೆತರಲಾಗಿತ್ತು. ಈಗಲೂ ಆತನನ್ನು ಹುಡುಕಿ ಕರೆ ತರಲಾಗುವುದು ಎಂದು ಹೇಳಿದರು. ಪರ್ವೇಜ್ ನಾಪತ್ತೆಯಾದ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಅವರನ್ನು ಪತ್ತೆಹಚ್ಚಲು ಎಲ್ಲ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದರು. ಪರ್ವೇಜ್ ಅವರ ತಂದೆ ಜಾಫರ್ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿ ಧೈರ್ಯ ತುಂಬಿದ್ದ ಸಚಿವರು, ಯಾವುದೇ ಸಮಸ್ಯೆ ಇದ್ದರೂ ಸರ್ಕಾರ ಪರಿಹರಿಸಲಿದೆ ಎಂದು ಭರವಸೆ ನೀಡಿದ್ದರು.



ಇದೀಗ ಪರ್ವೇಜ್ ಅವರು ಭೋಪಾಲ್‌ನಲ್ಲಿ ಪತ್ತೆಯಾಗಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ. ನಾಪತ್ತೆಯಾಗಿರುವ ಅಧಿಕಾರಿಯ ಪತ್ತೆಗೆ ಗದಗ ಪೊಲೀಸರು ಕಠಿಣ ಕ್ರಮ ಕೈಗೊಂಡಿದ್ದಾರೆ. ಆಂಧ್ರ ಪ್ರದೇಶದ ವಿಜಯವಾಡದಲ್ಲಿ ಮೊಬೈಲ್ ಸ್ವಿಚ್ ಆಫ್ ಮಾಡಿ ನಾಪತ್ತೆಯಾಗಿರುವ ಪರ್ವೇಜ್ ಅಲ್ಲಿಂದ ರೈಲಿನಲ್ಲಿ ಭೂಪಾಲ್‌ಗೆ ತೆರಳಿರುವ ಸಾಧ್ಯತೆ ಇದೆ. 1200 ಕಿಲೋ ಮಿಟರ್ ಉದ್ದಕ್ಕೂ ಅಧಿಕಾರಿಗಳು ಸಿಸಿಟಿವಿ ಪರಿಶೀಲಿಸಿದ್ದಾರೆ. ಭೂಪಾಲ್ ನ ರೈಲ್ವೆ ನಿಲ್ದಾಣದಲ್ಲಿ ಹೆಗಲಿಗೆ ಬ್ಯಾಗ್ ತಗುಲಿಹಾಕಿಕೊಂಡು ಪರ್ವೇಜ್ ನಡೆದು ಹೋಗುತ್ತಿರುವುದು ಸಿಸಿಟಿವಿಯಲ್ಲಿ ಪತ್ತೆಯಾಗಿದೆ. ಈ ವಿಡಿಯೋವನ್ನು ಪೊಲೀಸರು ಪರಿಶೀಲಿಸಿದ್ದು, ಆತನ ಮುಂದಿನ ಚಲನವಲನಗಳ ಮೇಲೂ ಕಣ್ಣಿಟ್ಟಿದ್ದಾರೆ. ಕುಟುಂಬದ ಸದಸ್ಯರಿಗೆ ಮಾಹಿತಿ ನೀಡಿದ್ದಾರೆ. ಇದರಿಂದ ಕುಟುಂಬಸ್ಥರು ಹಾಗೂ ಅಧಿಕಾರಿಗಳು ನೆಮದಿಯ ನಿಟ್ಟುಸಿರು ಬಿಡುವಂತಾಗಿದೆ.ಪರ್ವೇಜ್ ಈವರೆಗೂ ಮೊಬೈಲ್ ಆನ್ ಮಾಡದೇ ಇರುವುದು ಹಾಗೂ ಎಲ್ಲಿಯೂ ಎಟಿಎಂ ಕಾರ್ಡ್ ಅಥವಾ ಕ್ರೆಡಿಟ್ ಕಾರ್ಡ್ ಬಳಸದೆ ಇರುವುದು ಪೊಲೀಸರಿಗೆ ಸವಾಲಾಗಿದೆ.

# 2,500 ರೂ. ಬರ ಪರಿಹಾರ ಟೀಕಿಸಿದ ಎಚ್‌ಡಿಕೆಗೆ ಸಚಿವ ಬಾಲಕೃಷ್ಣ ತಿರುಗೇಟು

ಬೆಂಗಳೂರು: ಬರ ಪರಿಸ್ಥಿತಿಯಿಂದ ಸಂಕಷ್ಟಕ್ಕೊಳಗಾಗಿರುವ ರೈತರಿಗೆ ಬೆಳೆ ನಷ್ಟ ಪರಿಹಾರವಾಗಿ ರಾಜ್ಯ ಸರ್ಕಾರ ನೀಡುತ್ತಿರುವ ಪ್ರತಿ ಎಕರೆಗೆ 2,500 ರೂ. ಮೊತ್ತವನ್ನು ಟೀಕಿಸುತ್ತಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮೇಲೆ ಒತ್ತಡ ಹೇರಿ ಪ್ರತಿ ಎಕರೆಗೆ 50 ಸಾವಿರ ಪರಿಹಾರ ಕೊಡಿಸಲಿ ಎಂದು ಪೌರಾಡಳಿತ ಸಚಿವ ಎಚ್.ಸಿ. ಬಾಲಕೃಷ್ಣ ಸವಾಲು ಹಾಕಿದ್ದಾರೆ.ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಚ್.ಡಿ. ಕುಮಾರಸ್ವಾಮಿ ಅವರಿಗೆ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಿರುವುದನ್ನು ಸಹಿಸಲಾಗುತ್ತಿಲ್ಲ. ಹೀಗಾಗಿ ಹೊಟ್ಟೆಕಿಚ್ಚಿನಿಂದ ದಿನನಿತ್ಯ ಆರೋಪ ಮಾಡುತ್ತಿದ್ದಾರೆ ಎಂದು ಟೀಕಿಸಿದರು.



ಕುಮಾರಸ್ವಾಮಿ ಅವರು ಬ್ಲಾಕ್‌ಮೇಲ್ ರಾಜಕಾರಣ ಮಾಡುತ್ತಿದ್ದಾರೆ, ಹಿಂದೆ ಧರ್ಮಸಿಂಗ್ ಅವರ ಬೆನ್ನಿಗೆ ಚೂರಿ ಹಾಕಿದರು. ಮಾಟಮಂತ್ರ ಮಾಡಿಸಿ ಹೆದ–ರಿಸುತ್ತಾರೆ ಎಂದು ಜನ ಮಾತನಾಡಿಕೊಳ್ಳುತ್ತಾರೆ. ಕೇಂದ್ರದಲ್ಲಿ ಉತ್ತಮ ಖಾತೆಯ ಸಚಿವರಾಗಿರುವ ಕುಮಾರಸ್ವಾಮಿ ಅವರು ತಮ ಇಲಾಖೆಯಲ್ಲಿ ಉತ್ತಮ ಕೆಲಸ ಮಾಡುವ ಬದಲು ದಿನನಿತ್ಯ ಟೀಕೆ ಮಾಡುತ್ತಾ ಏಕೆ ತಿರುಗಾಡುತ್ತಿದ್ದಾರೆ ಎಂದು ಪ್ರಶ್ನಿಸಿದರು. ನೈಸ್ ಯೋಜನೆ ಆರಂಭಿಸಿದ್ದು, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು. ಅದರಲ್ಲಿ ಲೋಪಗಳಾಗಿದ್ದರೆ ಕುಮಾರಸ್ವಾಮಿ ಅವರು ಎರಡು ಬಾರಿ ಮುಖ್ಯಮಂತ್ರಿಯಾಗಿದ್ದಾಗ ಅವುಗಳನ್ನು ಏಕೆ ಸರಿಪಡಿಸಲಿಲ್ಲ ಅಥ–'ವಾ ಈ ಬಗ್ಗೆ ಏಕೆ ಮಾತನಾಡಲಿಲ್ಲ? ಎಂದು ಬಾಲಕೃಷ್ಣ ಪ್ರಶ್ನಿಸಿದರು.ನೈಸ್ ವಿಚಾರದಲ್ಲಿ ನಿರ್ಧಾರ ಕೈಗೊಳ್ಳಲು ಸಹಕಾರ ಸಿಗಲಿಲ್ಲ ಎಂದು ಕುಮಾರಸ್ವಾಮಿ ಈಗ ಹೇಳುತ್ತಿದ್ದಾರೆ. ಹಾಗಿದ್ದರೆ ಆಗಲೇ ರಾಜೀನಾಮೆ ನೀಡಬೇಕಿತ್ತು, ಅಧಿಕಾರದಲ್ಲೇ ಏಕೆ ಮುಂದುವರಿದರು ಎಂದು ಪ್ರಶ್ನಿಸಿದರು. ಇತ್ತೀಚೆಗೆ ಕುಮಾರಸ್ವಾಮಿ ನೀಡಿರುವ ಎಲ್ಲಾ ಆಸ್ತಿ ಮಾಹಿತಿಗಳು ಚುನಾವಣಾ ಆಯೋಗಕ್ಕೆ ಡಿ.ಕೆ. ಶಿವಕುಮಾರ್ ಸಲ್ಲಿಸಿರುವ ಪ್ರಮಾಣಪತ್ರಗಳಲ್ಲೇ ಇವೆ. ಯಾವುದನ್ನೂ ಮುಚ್ಚಿಟ್ಟಿಲ್ಲ. ಜೊತೆಗೆ ಆದಾಯ ತೆರಿಗೆ ಇಲಾಖೆ ಹಾಗೂ ಜಾರಿ ನಿರ್ದೇಶನಾಲಯದಿಂದಲೂ ತನಿಖೆ ನಡೆದಿದೆ. ಹೀಗಾಗಿ ಕುಮಾರಸ್ವಾಮಿ ಅವರ ಆರೋಪಗಳು ಹೊಸ ವಿಚಾರವೇನಲ್ಲ ಎಂದು ಹೇಳಿದರು. ರೈತರ ವಿಚಾರದಲ್ಲಿ ರಾಜ್ಯ ಸರ್ಕಾರ ನೀಡುತ್ತಿರುವ 2,500 ಪರಿಹಾರವನ್ನು ಟೀಕಿಸುವ ಬದಲು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮೇಲೆ ಒತ್ತಡ ಹೇರಿ ರಾಜ್ಯದ ರೈತರಿಗೆ ಪ್ರತಿ ಎಕರೆಗೆ 50 ಸಾವಿರ ಪರಿಹಾರ ಕೊಡಿಸಲಿ. ಹಾಗೆ ಮಾಡಿದರೆ ಅವರನ್ನು ಮೆಚ್ಚುತ್ತೇವೆ ಎಂದು ಬಾಲಕೃಷ್ಣ ಹೇಳಿದರು.ಇತರರ ಆಸ್ತಿ ವಿಚಾರವಾಗಿ ಟೀಕೆ ಮಾಡುವ ತಾವು ಗಾಜಿನ ಮನೆಯಲ್ಲಿ ಕುಳಿತಿದ್ದೇವೆ ಎಂಬುದನ್ನು ಮರೆಯಬಾರದು. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಅವರ ಸಹೋದರ ಬಾಲಕೃಷ್ಣ ಗೌಡ ಅವರ ಆದಾಯ ಏಕಾಏಕಿ ಒಂದು ಸಾವಿರ ಕೋಟಿ ರೂಪಾಯಿ ಹೆಚ್ಚಾಗಿದ್ದು ಹೇಗೆ ಎಂಬುದರ ಬಗ್ಗೆಯೂ ಪ್ರಶ್ನೆಗಳಿವೆ ಎಂದು ಹೇಳಿದರು. ಕುಮಾರಸ್ವಾಮಿ ಅವರ ಕುಟುಂಬದ ಆಸ್ತಿ ವಿಚಾರಗಳ ಬಗ್ಗೆಯೂ ತನಿಖೆಯಾಗಲಿ. ಈ ಸಂಬಂಧ ನಾವು ಮಾಹಿತಿಗಳನ್ನು ಕಲೆ ಹಾಕುತ್ತಿದ್ದೇವೆ ಎಂದು ಬಾಲಕೃಷ್ಣ ತಿಳಿಸಿದರು. ಮಾಜಿ ಮುಖ್ಯಮಂತ್ರಿ ಆಗಿದ್ದ ಕುಮಾರಸ್ವಾಮಿ ಅವರು ಇತರರ ಬಗ್ಗೆ ಹಗುರವಾಗಿ ಅಥವಾ ಏಕವಚನದಲ್ಲಿ ಮಾತನಾಡುತ್ತಾರೆ. ನಮಗೂ ಏಕವಚನದಲ್ಲಿ ಮಾತನಾಡಲು ಬರುತ್ತದೆ. ಅದನ್ನು ಅರಿತುಕೊಳ್ಳಲಿ. ಹತ್ತು ಸಾವಿರ ಜನರನ್ನು ಕರೆತಂದು ಹೆದ್ದಾರಿ ಬಂದ್ ಮಾಡುತ್ತೇನೆ ಎಂದು ಹೇಳುವುದು ಮಾಜಿ ಮುಖ್ಯಮಂತ್ರಿಯವರ ಘನತೆಗೆ ತಕ್ಕದ್ದಲ್ಲ ಎಂದು ಹೇಳಿದರು.

ನೈಸ್ ವಿಚಾರದಲ್ಲಿ ಅಶೋಕ್ ಖೇಣಿ ಅವರೊಂದಿಗೆ ವ್ಯಾಪಾರಕ್ಕೆ ಯತ್ನಿಸಿದ್ದರು. ಅದು ಸಾಕಾರಗೊಳ್ಳಲಿಲ್ಲ. ಅದಕ್ಕೇ ಈಗ ಬ್ಲಾಕ್ ಮೇಲ್ ಮಾಡುತ್ತಿದ್ದಾರೆ. ದಿನನಿತ್ಯ ಆರೋಪ ಮಾಡುತ್ತಿದ್ದಾರೆ ಎಂದು ಹೇಳಿದರು. ಕೇಂದ್ರ ಸಚಿವರಾಗಿರುವ ಕುಮಾರಸ್ವಾಮಿ ಅವರು ಮಹದಾಯಿ ಹಾಗೂ ಮೇಕೆದಾಟು ಯೋಜನೆಗಳಿಗೆ ಅನುಮೋದನೆ ಕೊಡಿಸಲು ಪ್ರಯತ್ನಿಸಲಿ. ದಿನ ಬೆಳಗಾದರೆ ರಾಜ್ಯ ಸರ್ಕಾರದ ವಿರುದ್ಧ ಆರೋಪ ಮಾಡುವ ಮೂಲಕ ಶ್ರೀ ಸಾಮಾನ್ಯರ ಕೆಲಸ ಮಾಡಲು ಬಿಡದೆ ಬ್ಲಾಕ್‌ಮೇಲ್ ಮಾಡುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಗ್ಯಾರಂಟಿ ಯೋಜನೆಗಳ ಬಗ್ಗೆ ತಮಗೆ ಯಾವುದೇ ಬೇಸರವಿಲ್ಲ. ಹೊಸ ಯೋಜನೆಗಳನ್ನು ಕೈಗೊಳ್ಳಲು ಹಣ–ಕಾಸಿನ ಸಮಸ್ಯೆ ಎದುರಾಗುತ್ತಿದೆ ಎಂಬಥ–'ರ್ದಲ್ಲಿ ಮಾತನಾಡಿದ್ದೇನೆ. ಆದರೆ ಈಗಾಗಲೇ ಚಾಲ್ತಿಯಲ್ಲಿರುವ ಕಾಮಗಾರಿಗಳು ಹಾಗೂ ಯೋಜನೆಗಳನ್ನು ಮುಂದುವರಿಸಲಾಗುವುದು ಎಂದು ಬಾಲಕೃಷ್ಣ ಹೇಳಿದರು. ಹಾಲಿನ ದರ ಹೆಚ್ಚಳ ಮಾಡುವಂತೆ ಮುಖ್ಯಮಂತ್ರಿ ಈಗಾಗಲೇ ಸೂಚನೆ ನೀಡಿದ್ದಾರೆ. ಹಾಲಿನ ದರ ಹೆಚ್ಚಳದಿಂದ ಬರಗಾಲದ ಸಂಕಷ್ಟದಲ್ಲಿರುವ ರೈತರಿಗೆ ಅನುಕೂಲವಾಗಲಿದೆ ಎಂದು ಅವರು ತಿಳಿಸಿದರು.

Publisher and Owned by CHANDRAKANTA From Near Durgamma Temple Dyampur, Koppal District- 583232 Printed at VINAYA Printers, VINAYA Publication Word No.01 Ballary Pootwer, Bhagynagar, Koppal- 583238, Editor : CHANDRAKANTA enammadhruthinews@gmail.com